ತಿಂಗಳ ಪತ್ರಿಕೆ

ಡಿಸೆಂಬರ್ 2001

ಅಚಲ

ಒಳಗೇನಿದೆ ?

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 16 ಸಂಚಿಕೆ - 12

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on
behalf of Jagruthi Mahila
Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಆಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಸಶಕ್ತೀಕರಣಕ್ಕೆ ತಡೆಯೇ?

ಕಳೆದ ದಶಕದಿಂದ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಕ್ರಿಯಾಶೀಲವಾಗಿದ್ದ ಸ್ವಸಹಾಯಗುಂಪುಗಳು ಮಹಿಳೆಯರ ಬದುಕನ್ನೇ ಬದಲಾಯಿಸುವಲ್ಲಿ ಪ್ರಮುಖ ಪಾತ್ರವಹಿಸಿದವು. ಅವರ ಕುಟುಂಬಗಳ ಆರ್ಥಿಕತೆಗೆ ಆಸರೆಯಾದ ಈ ಯೋಜನೆ ಮಹಿಳೆಯರನ್ನು ಅವರ ಕುಟುಂಬಗಳ ಸದಸ್ಯರು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳುವಂತೆ ಒತ್ತಾಯಿಸಿದವು. ಆರ್ಥಿಕ ಬಲ, ಹೊರ ಜಗತ್ತಿನ ತಿಳುವಳಿಕೆಯೊಂದಿಗೆ ಹೆಚ್ಚಿದ ಜಾಗೃತಿಯಿಂದಾಗಿ ಈ ಮಹಿಳೆಯರು ತಮ್ಮ ಸುತ್ತಮುತ್ತಲಿನ ಸಮಸ್ಯೆಗಳಿಗೆ ಕ್ರಿಯಾಶೀಲವಾಗಿ ಸ್ಪಂದಿಸುವಂತೆ ಮಾಡಿತು. ಈ ಪ್ರಕ್ರಿಯೆಯಲ್ಲಿ ಮದ್ಯಪಾನ ವಿರೋಧಿ ಚಳುವಳಿ ಅತ್ಯಂತ ಮಹತ್ವದ ಪಾತ್ರ ವಹಿಸಿತು. ಮದ್ಯದಂಗಡಿಗಳನ್ನು ಪ್ರತಿಭಟಿಸಿ ಬೀದಿಗಿಳಿದ ಮಹಿಳೆಯರು ಹಲವಾರು ಕಷ್ಟ ಸಂಕಷ್ಟಗಳನ್ನು ಈಗ ಎದುರಿಸಬೇಕಾಗಿ ಬಂದಿದೆ.

ಈ ವರ್ಷವನ್ನು ಸಶಕ್ತೀಕರಣವೆಂದು ಸರ್ಕಾರ ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಸ್ತ್ರೀಶಕ್ತಿ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಹಲವಾರು ಮಹಿಳೆಯರು ಈ ಯೋಜನೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದಲ್ಲದೆ ಸಾಮಾಜಿಕ ಜಾಗೃತಿಯಲ್ಲೂ ಪಾಲ್ಗೊಂಡಿದ್ದಾರೆ. ಹೆಂಗಸರ ಈ ಜಾಗೃತಿಯ ಬೆಳವಣಿಗೆಗೆ ಸಂತೋಷ ಪಡುವುದರ ಬದಲು ಮದ್ಯದಂಗಡಿಗಳ ಮಾಲೀಕರಿಗೆ ಪೋಲೀಸ್ ಬೆಂಬಲ ಕೊಟ್ಟು ಸ್ವಸಹಾಯ ಗುಂಪುಗಳ ವಿರುದ್ಧ ಸರ್ಕಾರ ಸಮರ ಸಾರಿದೆ. ಕೆಲವು ಊರುಗಳಲ್ಲಿ ಸ್ವಸಹಾಯ ಗುಂಪುಗಳು ಕೇವಲ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವುದನ್ನು ಬಿಟ್ಟು ಉಳಿದ ಸಾಮಾಜಿಕ ಕಾರ್ಯಗಳಲ್ಲಿ ಯಾಕೆ ತೊಡಗಬೇಕು ಎಂದು ಬೆದರಿಕೆಯನ್ನು ಹಾಕಲಾಗಿದೆ. ಹಾಗೆಂದ ಮಾತ್ರಕ್ಕೆ ಮಹಿಳಾ ಕಲ್ಯಾಣಕ್ಕೆಂದು ರೂಪಿಸಲಾಗುವ ಯೋಜನೆಗಳು ಕೇವಲ ಪ್ರಚಾರ ತಂತ್ರವೇ ಎಂಬ ಅನುಮಾನ ಮೂಡುತ್ತಿದೆ. ಇದು 'ಸಶಕ್ತೀಕರಣ ವರ್ಷ'ವೆನ್ನುವುದರ ಅಣಕವೇ?

ಹಸುಳೆಗಳು ಹಸೆಮಣೆಯ ಮೇಲೆ

ಡಿಸೆಂಬರ್ 8ರಂದು ಬಾದಾಮಿಯಲ್ಲಿ 1001 ಜೊತೆ ವಧುವರರ ಸರಳ ಸಾಮೂಹಿಕ ವಿವಾಹವಾಯಿತೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಧರ್ಮೀಯರು, ಅಂತರ್ಜಾತೀಯರು, ದೇವದಾಸಿಯರು, ವಿಧವೆಯರು - ಹೀಗೆ ಎಲ್ಲ ರೀತಿಯ ಜನಸಮುದಾಯದವರು ಈ ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡಿದ್ದಾರೆನ್ನುವುದು ಸ್ವಾಗತಾರ್ಹ ಅಂಶ. ಈ ಸಮಾರಂಭಕ್ಕೆ ಮುಖ್ಯ ಮಂತ್ರಿಗಳು ವಿಶೇಷ ಅತಿಥಿಗಳಾಗಿ ಭಾಗವಹಿಸಿದರು. ಅಲ್ಲಿನ ಸ್ಥಳೀಯ ಮಂತ್ರಿಗಳೂ ಇದ್ದರು. ಹೀಗೆ ಮಂತ್ರಿಮಹೋದಯರ ಸಮ್ಮುಖದಲ್ಲಿ ನಡೆದ ಮದುವೆ ಹಲವಾರು ಖಂಡನೀಯ ಅಂಶಗಳನ್ನು ಒಳಗೊಂಡಿತ್ತು.

ಈ ಸಮಾರಂಭದಲ್ಲಿ ಇಪ್ಪತ್ತಕ್ಕೂ ಹೆಚ್ಚು ಹಸುಳೆಗಳ ಜೋಡಿಗಳಿದ್ದವು. ಆಟ ಆಡಿಕೊಂಡಿರಬೇಕಾದ ಹಸುಳೆಗಳು ಹಸೆ ಮನೆ ಏರಿದ್ದವು. ಇದು ಅತ್ಯಂತ ಖಂಡನೀಯ ಹಾಗೂ ಕಾನೂನುಬಾಹಿರ ಅಂಶ. ಈಶ್ವರ ಚಂದ್ರ ವಿದ್ಯಾಸಾಗರರ ಕಾಲದಿಂದ ಇಂದಿನ ಭಾಂವ್ರಿದೇವಿಯವರೆಗೂ ಬಾಲವಿವಾಹದ ವಿರುದ್ಧ ಹೋರಾಟ ಸತತವಾಗಿ ನಡೆಯುತ್ತಲೇ ಇದೆ. ಈ ಹಿನ್ನೆಲೆಯಲ್ಲಿ 'ಸಶಕ್ತೀಕರಣ ವರ್ಷ'ದಲ್ಲಿ ನಮ್ಮ ಹೈಟೆಕ್ ಮುಖ್ಯಮಂತ್ರಿಯವರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದದ್ದು ಅವಮಾನಕರ. ಅಷ್ಟೇ ಅಲ್ಲ, ಸರ್ವಧರ್ಮದ ಗಣ್ಯರು ಅಲ್ಲಿ ಉಪಸ್ಥಿತರಿದ್ದು ಕಾನೂನು ಬಾಹಿರಕೃತ್ಯವೊಂದಕ್ಕೆ ಸಾಕ್ಷಿಯಾಗಿರುವುದು ಇನ್ನೂ ಖಂಡನೀಯ.

1001ರ ಸಂಖ್ಯೆಯನ್ನು ತುಂಬುವುದಕ್ಕೆ ವ್ಯವಸ್ಥಾಪಕರು ಹೀಗೆ ಮಾಡಿರಬಹುದೇ? ಈ ಸಂಖ್ಯೆಗೆ ಯಾಕೆ ಜೋತುಬೀಳಬೇಕಿತ್ತು. ಸಮಾರಂಭದಲ್ಲಿದ್ದ ಹಸುಳೆಗಳನ್ನೇನೋ ಸುಲಭವಾಗಿ ಯಾರಾದರೂ ಗುರುತಿಸಬಹುದು ? ಆದರೆ ಅಲ್ಲಿ ಬಹುಪತ್ನಿತ್ವದ ವಿವಾಹಗಳು ಯಾಕೆ ನಡೆದಿರಬಾರದು? ಎಂಬ ಅನುಮಾನ ಹುಟ್ಟುವುದಿಲ್ಲವೇ? ಇನ್ನು ಮುಂದಾದರೂ ಇಂತಹ ಕಾರ್ಯಕ್ರಮಗಳ ಸಂಯೋಜಕರು ಇಂತಹ ಅಮಾನವೀಯವಾದ ಮತ್ತು ಕಾನೂನುಬಾಹಿರವಾದ ಕೃತ್ಯಗಳನ್ನೆಸಗದಂತೆ ನೋಡಿಕೊಳ್ಳಬೇಕೆಂದು ಅಚಲ ಒತ್ತಾಯಿಸುತ್ತದೆ.

– ಎನ್. ಗಾಯಿತ್ರಿ

ಹೊಸ ಬದುಕಿನ ನಿರೀಕ್ಷೆಯಲ್ಲಿ

- ರಾಸಿಲ್ ಬಸು

ವಿಶ್ವ ವಾಣಿಜ್ಯ ಕೇಂದ್ರ ಮತ್ತು ಪೆಂಟಗನ್ ಮೇಲೆ ಸೆಪ್ಟೆಂಬರ್ 11ರಂದು ನಡೆದ ಅನಿರೀಕ್ಷಿತದಾಳಿಯ ನಂತರ ಅಮೆರಿಕಾ ಮತ್ತು ಅವರ ಮಿತ್ರ ಸರ್ಕಾರಗಳೆಲ್ಲಾ ಆಫ್ಘಾನಿಸ್ಥಾನದ ಮಹಿಳೆಯರ ಬಗ್ಗೆ ಅನುಕಂಪದ, ಸಹಾನುಭೂತಿಯ ಮಹಾಪೂರವನ್ನೇ ಹರಿಸಿಬಿಟ್ಟವು.

ಸೆಪ್ಟೆಂಬರ್ 11ರ ಘಟನೆಗೆ ತೀವ್ರವಾಗಿ ಪ್ರತಿಕ್ರಿಯಿಸಿದ ಅಮೆರಿಕಾ ಆಫ್ಘಾನಿಸ್ಥಾನದ ವಿರುದ್ಧ ಸಮರಸಾರಿತು. ತಾಲಿಬಾನ್ ಆಡಳಿತವನ್ನು ಕೆಳಗಿಳಿಸಿ ಭಯೋತ್ಪಾದನೆಯನ್ನು ಅಂತ್ಯಗೊಳಿಸುವದಾಗಿ ಘೋಷಿಸಿತು. 'ಜೀವಂತವಾಗಲಿ' ಇಲ್ಲವೇ 'ಹೆಣ'ವಾಗಿಯಾಗಲೀ ಒಸಮಾ ಬಿನ್ ಲಾಡೆನ್‌ನನ್ನು ಸೆರೆಹಿಡಿಯುವುದಾಗಿ ಪ್ರಕಟಿಸಿತು. ತಮ್ಮ ಈ ನಿಲುವನ್ನು ಸಮರ್ಥಿಸಿಕೊಳ್ಳುತ್ತಾ ವಿಶ್ವಸಂಸ್ಥೆಯ ಸಾಮಾನ್ಯಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅಧ್ಯಕ್ಷ ಬುಶ್, ತಾಲಿಬಾನ್ ಮಹಿಳೆಯರಿಗೆ ನೀಡುತ್ತಿದ್ದ ಕಷ್ಟಗಳನ್ನು ಕುರಿತು ಮಾತನಾಡಿದರು. ಇಷ್ಟೇ ಅಲ್ಲದೆ, ಲಾರಾಬುಶ್ ದೇಶವನ್ನುದ್ದೇಶಿಸಿ ಮಾಡಿದ ರೇಡಿಯೋ ಭಾಷಣದಲ್ಲಿ ಆಫ್ಘಾಸ್ಥಾನದ ಮಹಿಳೆಯರ ದಯನೀಯಸ್ಥಿತಿಯೇ ಅವರಿಗೆ ರಾಜಕೀಯದಲ್ಲಿ ಪ್ರವೇಶ ದೊರಕಿಸಿತು, ಎಂಬಂತಹ ಮಾತುಗಳನ್ನಾಡಿದರು. ಆಫ್ಘಾನಿಸ್ಥಾನದಲ್ಲಿ ಪ್ರಜಾಸತ್ತೆಯನ್ನು ಪುನರ್‌ಸ್ಥಾಪಿಸುವ ಕಾರ್ಯದಲ್ಲಿ ಮಹಿಳೆಯರಿಗೂ ಮಹತ್ವದ ಪಾತ್ರವಿರಬೇಕೆಂದು ಲಾರಾ ಅಭಿಪ್ರಾಯಪಟ್ಟರು. ಆಫ್‌ಘಾನ್ ಮಹಿಳೆಯರ ದುಸ್ಥಿತಿಯು ಅರ್ಥವಾಗಬೇಕಾದರೆ ಅಮೆರಿಕಾಕ್ಕೆ ಹದಿಮೂರು ವರ್ಷಗಳು ಬೇಕಾದವೇ ಎಂಬ ಸಂಶಯದ ಜೊತೆಗೆ ಈ ದುರವಸ್ಥೆಯು ಅಮೆರಿಕಾ ಈ ದೇಶಕ್ಕೆ ಸೋವಿಯೆತ್ ಒಕ್ಕೂಟದ ಆಕ್ರಮಣ ಸಂದರ್ಭದಲ್ಲಿ ನೀಡಿದ ಕೊಡುಗೆಯಾಗಿದೆ, ಎಂಬುದನ್ನು ಗಮನಿಸಬೇಕು.

ಸೋವಿಯೆತ್ ಆಕ್ರಮಿತ ಆಫ್ಘಾನಿಸ್ತಾನಧ ಸಂದರ್ಭದಲ್ಲಿ ಮಹಿಳೆಯರು ಆರ್ಥಿಕವಾಗಿ ಬಹಳ ಮುಂದಿದ್ದರು. ಅನಕ್ಷರತೆಯು ಶೇ. 98ರಿಂದ ಶೇ. 75ಕ್ಕೆ ಇಳಿದಿತ್ತು. ಪುರುಷರೊಂದಿಗೆ ಸಮಾನ ಹಕ್ಕುಗಳನ್ನು ಸಿವಿಲ್ ಕಾನೂನು ಮತ್ತು ಸಂವಿಧಾನದಲ್ಲಿ ಹೊಂದಿದ್ದರು. ಹಾಗೆಂದ ಮಾತ್ರಕ್ಕೆ ಲಿಂಗಸಮಾನತೆ ಸಂಪೂರ್ಣವಾಗಿ ಸಾಧಿಸಿತ್ತೆಂದು ಇದರ ಅರ್ಥವಲ್ಲ. ದುಡಿಯುವ ಸ್ಥಳಗಳಲ್ಲಿ ಮತ್ತು ಕುಟುಂಬದಲ್ಲಿ ಪಿತೃಪ್ರಧಾನ ಸಂಬಂಧಗಳು ಹೆಣ್ಣಿನ ಸ್ಥಾನವನ್ನು ಮೊಟಕುಗೊಳಿಸುತ್ತಲೇ ಇದ್ದವು. ಆದರೆ ಈ ಸ್ಥಿತಿಯ ಮಧ್ಯೆಯೂ ಇಲ್ಲಿನ ಮಹಿಳೆಯರು ಶಿಕ್ಷಣ ಮತ್ತು ಉದ್ಯೋಗದ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಗಮನಾರ್ಹ. ಈ ಬದಲಾವಣೆಯನ್ನು ನಾನು ಪ್ರತ್ಯಕ್ಷದರ್ಶಿಯಾಗಿ ವೀಕ್ಷಿಸಿದ್ದೇನೆ. 1986ರಿಂದ 1988ರ ಅವಧಿಯಲ್ಲಿ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು (UNDP) ಆಫ್ಘಾನ್ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮವನ್ನು ಅಭ್ಯಸಿಸಲು ನನ್ನನ್ನು ಅಲ್ಲಿಗೆ ಕಳುಹಿಸಿತ್ತು. ಈ ಅವಧಿಯಲ್ಲಿ ನಾನು ಕಾಬೂಲ್‌ನಲ್ಲಿ ಮಹಿಳೆಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ಪ್ರಗತಿಯನ್ನು ಗಮನಿಸಿದೆ. ಯುದ್ಧಗಳಲ್ಲಿ ಬಹಳಷ್ಟು ಗಂಡಸರು ಸತ್ತದ್ದರಿಂದ ಆ ಕುಟುಂಬಗಳ ಮಹಿಳೆಯರು ಮನೆಯ ಮತ್ತು ದೇಶದ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡರು. ಆಗ ನಾನು ಯುದ್ಧ ಔಷದಿಯಲ್ಲಿ ಪರಿಣಿತಳಾದ ವೈದ್ಯೆಯೊಬ್ಬಳನ್ನು ಭೇಟಿಯಾಗಿದ್ದೆ. ರಸ್ತೆಗಳ ನಿರ್ಮಾಣದಲ್ಲಿ ಪರಿಣಿತಳಾದ ಮತ್ತೊಬ್ಬ ಮಹಿಳಾ ಇಂಜನಿಯರನ್ನೂ ಭೇಟಿಯಾಗಿದ್ದೆ.

ಆದರೆ 1988ರ ವೇಳೆಗಾಗಲೇ ಆಪತ್ತಿನ ಘಂಟೆಗಳು ತಮ್ಮ ಸೂಚನೆಯನ್ನು ನಿಧಾನವಾಗಿ ಕೊಡಲಾರಂಭಿಸಿದವು. ಮೊದಲ ಸೋವಿಯತ್ ಸೈನಿಕ ಪಡೆ ಕಾಲ್ತೆಗೆಯುವ ಮುನ್ನವೇ ಮನೆಯಿಂದ ಹೊರ ಬರುವ ಮಹಿಳೆಯರಿಗೆ ಎಚ್ಚರಿಕೆಯ ಕರಪತ್ರಗಳು ಬೆದರಿಸಲಾರಂಭಿಸಿದವು. ಗುಲ್‌ಬುದ್ದೀನ್ ಹೆಕ್‌ಮತ್ಯಾರ್‌ನ ಅನುಯಾಯಿಗಳು ಮಹಿಳೆಯರ ಮೇಲೆ ಏಸಿಡ್ ಎರಚಲು ಪ್ರಾರಂಭಿಸಿದರು. ಬೀದಿಗಳಲ್ಲಿ ಸ್ಕರ್ಟ್, ಪ್ಯಾಂಟು ಮತ್ತು ತುಂಡು ತೋಳಿನ ಉಡುಗೆ ತೊಟ್ಟು ಓಡಾಡುವ ಮಹಿಳೆಯರು ವಿಶೇಷವಾಗಿ ಇಂತಹ ದಾಳಿಗೆ ತುತ್ತಾದರು. ಉದಾರವಾದಿ ನಿಲುವಿನ ಮುಜಾಹುದ್ದೀನ್ ಪಂಗಡದ ವಿರುದ್ಧ ಸೆಣಸಾಡುತ್ತಿದ್ದ ಮತ್ತು ತಮ್ಮನ್ನು 'ಸ್ವಾತಂತ್ರ್ಯ ಹೋರಾಟಗಾರರೆಂದು ಕರೆದುಕೊಳ್ಳುತ್ತಿದ್ದ ಮೂರು ಮೂಲಭೂತವಾದಿ ಪಂಗಡಗಳಿಗೆ (ಹೆಕ್‌ಮತ್ಯಾರ್, ಖಾಲೀಸ್ ಮತ್ತು ರಬ್ಬಾನಿ) ಅಮೆರಿಕಾ ಸರ್ಕಾರವು ನಿರಂತರವಾಗಿ ಪ್ರೋತ್ಸಾಹಿಸಿ, ಬೆಂಬಲಿಸಿತು. ಸೌದಿ ಅರೇಬಿಯಾ ಮತ್ತು ಅಮೆರಿಕಾದಿಂದ ದೊರಕುತ್ತಿದ್ದ ಶಸ್ತ್ರಾಸ್ತ್ರ ನೆರವು ಈ ಮೂಲಭೂತವಾದಿ ಗುಂಪುಗಳಿಗೆ ಸುಧಾರಣವಾದಿ ಪಂಗಡವನ್ನು ಮಟ್ಟ ಹಾಕಲು ನೆರವಾದವು. ಅಷ್ಟೇ ಅಲ್ಲ ಈ ಅಸ್ತ್ರಗಳು ಮಹಿಳೆಯರನ್ನು ಮತ್ತು ಮಕ್ಕಳನ್ನು ಹದ್ದುಬಸ್ತಿನಲ್ಲಿಡಲು ಬಳಸಲಾಯಿತು.

1988ರ ನಂತರ ಇಸ್ಲಾಮಿಕ್ ಮಂತ್ರಿ ಮಂಡಲವು ಮಹಿಳೆಯರನ್ನು ಅವರ ಸ್ಥಾನಗಳಿಂದ ವಜಾಮಾಡಿತು. ಒಂದು ಕಟ್ಟುನಿಟ್ಟಾದ ವಸ್ತ್ರ ಸಂಹಿತೆಯನ್ನು ವಿಧಿಸಿತು. ತಲೆಗೊಂದು ಸ್ಕಾರ್ಫ್, ಸಾಂಪ್ರದಾಯಿಕವಾದ ಉದ್ದದ ನಿಲುವಂಗಿ, ಕುರ್ತಾ ಮತ್ತು ಪೈಜಾಮ. ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಊಟದ ಬಿಡುವಿನ ವೇಳೆಯಿಲ್ಲಿ ಶಾಲೆಗಳಲ್ಲಿ ಬಾಲಕ - ಬಾಲಕಿಯರ ಸಹ ಶಿಕ್ಷಣವನ್ನು ತೆಗೆದುಹಾಕಲಾಯಿತು. ಸರ್ಕಾರಕ್ಕೆ ಹಣದ

ಮುಗ್ಗಟ್ಟಿದೆಯೆಂಬ ಕಾರಣದಿಂದ ನಿಧಾನವಾಗಿ ಬಾಲಿಕೆಯರ ಶಾಲೆಗಳನ್ನು ಮುಚ್ಚುವ ಕ್ರಮ ತೆಗೆದುಕೊಳ್ಳಲಾಯಿತು. ಆ ಸಂದರ್ಭದಲ್ಲಿ ನಾನು ಹಲವಾರು ಸಲಹೆ, ಸೂಚನೆಗಳನ್ನು ಕೊಟ್ಟಿದ್ದೆ. ಇಲ್ಲಿನ ಮಹಿಳೆಯರ ಕಲ್ಯಾಣಕ್ಕೆ ಪಶ್ಚಿಮ ದೇಶಗಳು, ಅದರಲ್ಲೂ ಮುಖ್ಯವಾಗಿ ಅಮೆರಿಕಾ ಅಲ್ಲಿನ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವತ್ತ ಮನಸ್ಸು ಮಾಡಬಹುದಿತ್ತು. ಅವರು ನೀಡುತ್ತಿದ್ದ ಸಾಲದ ನೆರವಿನ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕೆಂದು ಒತ್ತಿ ಹೇಳಬಹುದಿತ್ತು. ಮಹಿಳಾ ಶಾಲೆಗಳು, ಕಾಲೇಜುಗಳು, ಔದ್ಯೋಗಿಕ ತರಬೇತಿ ಸಂಸ್ಥೆಗಳನ್ನು ತೆರೆಯಲು ಶರತ್ತು ಹಾಕಬಹುದಿತ್ತು. ಆದರೆ ನನ್ನ ಈ ಎಲ್ಲ ಸಲಹೆಗಳು ಪುರಸ್ಕಾರ ಪಡೆಯದೆ ತಿರಸ್ಕರಿಸಲ್ಪಟ್ಟವು.

ಆದರೆ ಆ ನಂತರದ ಘಟನೆಗಳು ಯಾರ ಊಹೆಗೂ ಸಿಲುಕದಷ್ಟು ಭಯಾನಕವಾಗಿದ್ದವು. 1992ರಲ್ಲಿ ನಜೀಬುಲ್ಲಾ ಸರ್ಕಾರವನ್ನು ಉರುಳಿಸಿದ ಮೇಲೆ ಮೂಲಭೂತವಾದಿ ಗುಂಪುಗಳೊಳಗೆ ಅಂತರ್ಯುದ್ಧ ಪ್ರಾರಂಭವಾಯಿತು. ಸಾವಿರಾರು ನಾಗರೀಕರು ಈ ಗಲಭೆಯಲ್ಲಿ ಹತರಾದರು. ಅದರಲ್ಲಿ ವಿಶೇಷವಾಗಿ ಮಹಿಳೆಯರು ಬಲಿಯಾದರು. ಮುಜಾಹುದ್ದೀನ್ ಆಳ್ವಿಕೆಯಲ್ಲೇ ಸಂವಿಧಾನವನ್ನು ಅವಮಾನತುಗೊಳಿಸಲಾಯಿತು. ಆಫ್ಘಾನ್ ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಆಳುವ ಅರಸರು ಕಾನೂನಿನ ವ್ಯವಸ್ಥೆಯನ್ನು ಛಿದ್ರಗೊಳಿಸಿ, ಅದರ ಸಂಪೂರ್ಣ ಅಧಿಕಾರವನ್ನು ತಾವೇ ವಹಿಸಿಕೊಂಡರು. 1992 ಏಪ್ರಿಲ್‌ನಿಂದ 1995ರ ಫೆಬ್ರವರಿಯ ಅವಧಿಯಲ್ಲಿ ನಡೆದ ಮಹಿಳೆಯರ ಮೇಲಿನ ದೌರ್ಜನ್ಯದ ಪಟ್ಟಿಯನ್ನು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಸಿದ್ಧಗಳಿಸಿದೆ. ಇದು ಎಂತಹವರ ಎದೆ ನಡುಗಿಸುತ್ತದೆ. ವಿವಿಧ ಯುದ್ಧ ಸನ್ನದ್ಧ ಗುಂಪುಗಳ ಸೈನಿಕರು ನಡೆಸುತ್ತಿದ ಮಹಿಳೆಯರ ಮೇಲಿನ ಅತ್ಯಾಚಾರದ ಕೃತ್ಯಗಳನ್ನು ಅವರ ನಾಯಕರು ಕ್ಷಮಿಸಿ ಬಿಡುತ್ತಿದ್ದರು. ಬೆದರಿಸಿ ಜನಸಮುದಾಯವನ್ನು ಜಯಿಸುವ ಪ್ರಯತ್ನವಾಗಿ ಈ ಕೃತ್ಯವನ್ನು ನೋಡಲಾಗುತ್ತಿತ್ತು. ಅಷ್ಟೇ ಅಲ್ಲ, ಸೈನಿಕರಿಗೆ ಮನರಂಜನೆ ನೀಡಿ ಸನ್ಮಾನಿಸುವ ರೀತಿಯಾಗಿಯೂ ಇದನ್ನು ನೋಡಲಾಗುತ್ತಿತ್ತು. ಅತ್ಯಾಚಾರದ ಹೆದರಿಕೆಯಿಂದ ಬಹಳಷ್ಟು ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡದ್ದಿದೆ. ತಮ್ಮ ಹೆಣ್ಣು ಮಕ್ಕಳಿಗೆ ಒದಗಬಹುದಾದ ದುಸ್ಥಿತಿಯನ್ನು ಊಹಿಸಿಕೊಳ್ಳಲಾರದೆ ಎಷ್ಟೋ ತಂದೆಯರ ತಮ್ಮ ಮಕ್ಕಳನ್ನು ಕೊಂದದ್ದಿದೆ. ಹಲವಾರು ಮಹಿಳೆಯರನ್ನು ಹೊತ್ತು ಕೊಂಡು ಹೋಗಿ ಅತ್ಯಾಚಾರ ಮಾಡಿ, ಕೆಲವರನ್ನು ವೇಶ್ಯಾವೃತ್ತಿಗಾಗಿ ಮಾರಾಟ ಮಾಡಲಾಗಿದೆ. ವಿವಿಧ ಧರ್ಮೀಯ, ವರ್ಣಗಳಿಗೆ ಸೇರಿದವರೆಂಬ ಕಾರಣದಿಂದಲೂ ಮಹಿಳೆಯರನ್ನು ಚಿತ್ರಹಿಂಸೆಗೆ ಗುರಿಪಡಿಸಿದಿದ್ದೆ. ದೈಹಿಕವಾಗಿ ಚಿತ್ರಹಿಂಸೆ ಕೊಟ್ಟಿದ್ದಲ್ಲದೆ ಮಹಿಳೆಯರ ಮೂಲಭೂತ ಸ್ವಾತಂತ್ರ್ಯದ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಅವರಿಗೆ ವಾಕ್ ಸ್ವಾತಂತ್ರ್ಯವಿಲ್ಲ ; ಸಂಘಟನಾ ಸ್ವಾತಂತ್ರ್ಯವಿಲ್ಲ ; ಸ್ವತಂತ್ರವಾಗಿ ಓಡಾಡುವ, ಹೊರಗೆ ಹೋಗಿ ದುಡಿಯುವ ಸ್ವಾತಂತ್ರ್ಯವೂ ಇಲ್ಲ. 1994ರಲ್ಲಿ ಇಸ್ಲಾಮಿಕ್ ರಾಜ್ಯದ ಸುಪ್ರೀಂಕೋರ್ಟು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ ಎಲ್ಲಾ ಮಹಿಳೆಯರು ಇಡೀ ದೇಹವನ್ನು ಮುಚ್ಚುವಂತೆ ಬುರ್ಕಾ ಧರಿಸಬೇಕೆಂದು ಹೇಳಿತು. ಉತ್ತರ ಮೈತ್ರಿ ಕೂಟದಲ್ಲಿನ ಗುಂಪುಗಳು ನಡೆಸಿದ ರಾಜ್ಯಭಾರದ ವೈಖರಿ ಇದು. ಈ ಗುಂಪಿನ ಯುದ್ಧವೀರರಿಗೆ ಈಗ ಅಮೆರಿಕಾ ಮತ್ತು 'ನಾಗರೀಕ' ಪಶ್ಚಿಮ ಜಗತ್ತು ಪ್ರೋತ್ಸಾಹ ಕೊಟ್ಟು ಬೆಂಗಾವಲಾಗಿ ನಿಂತಿದೆ.

1995ರ ಫೆಬ್ರವರಿಯಲ್ಲಿ ತಾಲಿಬಾನ್ (ಧರ್ಮದ ಶಿಷ್ಯರು) ಒಂದು ಪ್ರಬಲ ಮತ್ತು ಜನಪ್ರಿಯ ರಾಜಕೀಯ ಶಕ್ತಿಯಾಗಿ ಬೆಳೆಯಿತು. ಒಂದೊಂದೇ ಪ್ರಾಂತ್ಯಗಳ ಅಧಿಕಾರವನ್ನು ವಶಮಾಡಿಕೊಳ್ಳಲು ಪ್ರಯತ್ನಿಸಿತು. ಇಸ್ಲಾಂನ್ನು ಕುರಿತಂತೆ ತನ್ನದೇ ಆದ ವ್ಯಾಖ್ಯಾನ ಮತ್ತು ವಿಶ್ಲೇಷಣೆಯನ್ನು ಕೊಡಲಾರಂಭಿಸಿತು. 'ದುಷ್ಟ ಶಿಕ್ಷಣ, ಶಿಷ್ಟರಕ್ಷಣೆ' ಮಾಡುವುದಕ್ಕೆಂದು 'ನೈತಿಕ ಪೋಲೀಸ್' ಪಡೆಗಳನ್ನು ಹುಟ್ಟು ಹಾಕಿತು. ಇವುಗಳ ನೀತಿ ನಿಯಮಗಳಂತೆ ಮಹಿಳೆಯರು ಶಿಕ್ಷಣ ಪಡೆಯುವಂತಿಲ್ಲ, ಶಾಲೆಗೆ ಹೋಗುವಂತಿಲ್ಲ, ತಲೆಯಿಂದ ಕಾಲಿನವರೆಗೆ ಮಹಿಳೆಯರು ಬುರ್ಕಾ ಧರಿಸಬೇಕೆಂದು ಕಡ್ಡಾಯ ಮಾಡಲಾಯಿತು. ಮೊದಲ ಮಹಡಿಯವರಿಗೂ ಎಲ್ಲರೂ ಅವರ ಮನೆಯ ಗಾಜಿನ ಕಿಟಕಿಗಳನ್ನು ಕಡ್ಡಾಯವಾಗಿ ಕಪ್ಪು ಪೇಯಿಂಟ್ ಬಳಿದು ಕೊಳ್ಳಬೇಕಿತ್ತು. ಮನೆಯೊಳಗಿರುವ ಹೆಂಗಸರು ಹೊರಗಿನ ಗಂಡಸರ ಕಣ್ಣಿಗೆ ಬೀಳಬಾರದಲ್ಲಾ! ಮಹಿಳೆಯರ ಮೇಲಿನ ದೌರ್ಜನ್ಯವನ್ನು ವರದಿ ಮಾಡಲೆಂದು ವಿಶ್ವಸಂಸ್ಥೆಯು ನಿಯೋಜಿಸಿದ್ದ ವಿಶೇಷ ವರದಿಗಾರ್ತಿ, ಶ್ರೀಲಂಕಾದ ರಾಧಿಕಾಕುಮಾರಸ್ವಾಮಿ ಹೀಗೆ ಹೇಳುತ್ತಾರೆ : ತಾಲಿಬಾನ್ ಆಳ್ವಿಕೆಯ ಆಫ್ಘಾನಿಸ್ಥಾನದ ಮಹಿಳೆಯರ ಮಾನವ ಹಕ್ಕುಗಳನ್ನು ಹಂತ ಹಂತವಾಗಿ ಕಸಿದು ಕೊಳ್ಳಲಾಯಿತು. ಬಹಳಷ್ಟು ಅತ್ಯಾಚಾರ ಪ್ರಕರಣಗಳಲ್ಲಿ ಮಹಿಳೆಯರನ್ನೇ ನಡತೆಗೆಟ್ಟವರೆಂದು ಸಾರ್ವಜನಿಕವಾಗಿ ಶಿಕ್ಷಿಸಲಾಯಿತು. 1992-96ರ ರಬ್ಬಾನಿ ಆಳ್ವಿಕೆಯ ಸಂದರ್ಭದಲ್ಲಿ ಮಹಿಳೆಯರ ಮೇಲೆ ಅತ್ಯಂತ ಹೆಚ್ಚು ದೌರ್ಜನ್ಯಗಳು ನಡೆದವು.

ಇಷ್ಟೆಲ್ಲ ಹಿಂಸೆ, ತುಳಿತಗಳ ನಡುವೆಯೂ ಆಫ್ಘಾನ್ ಮಹಿಳೆಯರ ತೋರಿಸದ ಅಪ್ರತಿಮ ಹೋರಾಟದ ಮನಸ್ಸು ಅಚ್ಚರಿ ತರುತ್ತದೆ. ಎಲ್ಲ ದುರಾಡಳಿತಗಳ ವಿರುದ್ಧವೂ ಹೋರಾಡುತ್ತಲೇ ಬಂದಿರುವ ಮಹಿಳೆಯರು ಅದಕ್ಕಾಗಿ ಸಾವಿಗೂ ಅಂಜುತ್ತಿಲ್ಲ. ಬಹಳಷ್ಟು ಮಂದಿ ಹೋರಾಟಕ್ಕೆ ಬಲಿಯಾಗಿದ್ದಾರೆ. ಈ ಹೋರಾಟಗಳಲ್ಲಿ ಅತ್ಯಂತ ಮುಖ್ಯವಾದ ಹೆಸರು, ರೆವೆಲ್ಯೂಷನರಿ ಅಸೋಸಿಯೇಷನ್ ಆಫ್ ವಿಮೆನ್

ಆಫ್ ಆಫ್ಘಾನಿಸ್ತಾನ (RAWA) 1977ರಲ್ಲಿ ಆರಂಭವಾದ ಈ ಸಂಸ್ಥೆಯು ಅಹಿಂಸಾ ಮಾರ್ಗದಿಂದಲೇ ಮಹಿಳಾ ದೌರ್ಜನ್ಯದ ವಿರುದ್ಧ ಹೋರಾಡುತ್ತಲೇ ಬಂದಿದೆ. ಭೂಗತವಾಗಿ ಹೆಣ್ಣು ಮಕ್ಕಳಿಗೆ, ಹೆಂಗಸರಿಗೆ ಶಾಲೆಗಳನ್ನು ತೆರೆದು, ಆಸ್ಪತ್ರೆಗಳನ್ನು ತೆರೆದು ಕಾರ್ಯನಿರ್ವಹಿಸಿತು. ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳನ್ನು ಪೇಷಾವರ್ ಮತ್ತು ಕ್ವೆಟ್ಟಾದಲ್ಲಿ ನಿರಾಶ್ರಿತ ಶಿಬಿರಗಳಲ್ಲಿರಿಸಿ ಶುಶ್ರೂಷೆ ಮಾಡಲಾಯಿತು. RAWAದ ಸ್ಥಾಪಕಿ ಮೀನಾಕಮಲ್‌ಳನ್ನು ಅವಳ ಜಿಹಾದ್ ವಿರೋಧಿ ಚಟುವಟಿಕೆಗಳಿಗಾಗಿ ಬೆದರಿಸುತ್ತಲೇ ಬಂದರು. ಅವಳ ಜೀವಕ್ಕೆ ಅಪಾಯವಿದೆಯೆಂದೂ, ರಕ್ಷಣೆ ಬೇಕೆಂದು ಪಾಕಿಸ್ಥಾನ ಸರ್ಕಾರಕ್ಕೆ ಮೊರೆಯಿಟ್ಟರೂ ಏನು ಪ್ರಯೋಜನವಾಗಲಿಲ್ಲ. 1987ರಲ್ಲಿ ಕ್ವೆಟ್ಟಾದ ಅವಳ ಮನೆಯಲ್ಲೇ ಕೊಲ್ಲಲಾಯಿತು.

1993ರಲ್ಲಿ ಆಫ್ಘಾನ್ ವಿಮೆನ್ಸ್ ಕೌನ್ಸಿಲ್ (AWC) ಸ್ಥಾಪಿತವಾಗಿದೆ. ಅದರಲ್ಲಿ ವೈದ್ಯೆಯರು, ಶಿಕ್ಷಕಿಯರು, ಕಾಲೇಜು ಅಧ್ಯಾಪಕಿಯರು ಒಟ್ಟಾಗಿ ಸೇರಿ ಪಾಕಿಸ್ಥಾನದಲ್ಲಿರುವ ನಿರಾಶ್ರಿತರ ಶಿಬಿರಗಳಲ್ಲಿನ ಮಹಿಳೆಯರು ಮತ್ತು ಮಕ್ಕಳಿಗೆ ಶಿಕ್ಷಣ, ವೈದ್ಯಕೀಯ ನೆರವು ನೀಡುತ್ತಿದ್ದಾರೆ. ಇಸ್ಲಾಂಮಿನ ಚೌಕಟ್ಟಿನೊಳಗೇ ಮಹಿಳೆಯರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರೂ ಮುಜಾಹುದ್ದೀನ್ ಗುಂಪಿನವರ ಕೆಂಗಣ್ಣಿಗೆ ಬಿದ್ದಿದ್ದಾರೆ.

ಆಫ್ಘಾನಿಸ್ಥಾನದ ಸಮರ ಈಗ ಸಂಪೂರ್ಣ ಒಂದು ಚಕ್ರಸುತ್ತಿದೆ. ಆಫ್ಘಾನಿಸ್ಥಾನದ ಎಲ್ಲ ಪಟ್ಟಣಗಳಲ್ಲೂ ತಾಲಿಬಾನರು ಸೋತಿದ್ದಾರೆ. ಒಸಮಾಬಿನ್ ಲಾದೆನ್‌ನನ್ನು ಜೀವಂತವಾಗಿಯಾಗಲಿ, ಶವವಾಗಲೀ ಅಮೆರಿಕಾಕ್ಕೆ ಇನ್ನೂ ಸೆರೆಹಿಡಿಯಲಾಗಿಲ್ಲ. ಪ್ರತಿಷ್ಠೆಯ ಈ ಸಮರದಲ್ಲಿ ಸತ್ತವರ ಸಂಖ್ಯೆ, ಗಾಯಗೊಂಡವರ, ಅಂಗವಿಕಲರಾದವರ ಸಂಖ್ಯೆ ಲೆಕ್ಕಕ್ಕೆ ಸಿಗದು. ಆದರೆ ವಿವಿಧ ವರ್ಣೀಯ ಗುಂಪುಗಳನ್ನೊಳಗೊಂಡ ತಾಜಿಕ್‌ಗಳು, ಹಜರಗಳು ಮತ್ತು ಉಜಬೆಕ್‌ರನ್ನೊಳಗೊಂಡ ಉತ್ತರ ಮೈತ್ರಿಕೂಟ ಈಗ ಸರ್ಕಾರ ಮಾಡಲು ಹೊರಟಿದೆ. ಆಫ್ಘಾನಿಸ್ಥಾನದಲ್ಲಿ ತಾಲಿಬಾನ್ ಆಳ್ವಿಕೆಗೆ ಮುಂಚೆ ಅಧಿಕಾರದಲ್ಲಿದ್ದವರು ಇವರೇ. ಇವರು ತಮ್ಮ ಹಿಂದಿನ ಆಳ್ವಿಕೆಯಲ್ಲಿ ಹೆಂಗಸರಿಗೆ ಏನು ಮಾಡಿದರು, ಎಂಬುದು ಈಗ ಚರಿತ್ರೆಯಲ್ಲಿ ದಾಖಲಾಗಿದೆ. ಇತ್ತೀಚಿನ ಅವರ ನಡವಳಿಕೆಗೆ ಮತ್ತೊಂದು ನಿದರ್ಶನ : ಕಾಬೂಲ್‌ನಲ್ಲಿ ನವೆಂಬರ್ 28ರಂದು ಯೂನಿಯನ್ ಆಫ್ ವಿಮೆನ್ ಸಂಘಟನೆಯು ಒಂದು ಶಾಂತಿಯಾತ್ರೆ ಯೋಜಿಸಿತ್ತು. ಈ ಶಾಂತಿ ಮೆರವಣಿಗೆಯನ್ನು ತಾತ್ಕಾಲಿಕ ಸರ್ಕಾರ ರದ್ದುಮಾಡಿತು. ಈ ಹೊಸ ಸಂಘಟನೆಯ ಸೊಗಯಾ ಪಾರ್ಲಿಕಾ ಹೇಳುತ್ತಾರೆ : ''ನಮ್ಮ ಶಾಂತಿ ಮೆರವಣಿಗೆಯನ್ನು ನಿಷೇಧಿಸುವುದಕ್ಕೆ 'ಶಿಸ್ತಿನ' ನೆಪ ಹೇಳುತ್ತಿದ್ದರೂ ಮುಖ್ಯವಾಗಿ ಅವರಿಗೆ ಮಹಿಳೆಯರು ಮುಂದುವರಿಯುವುದುಬೇಕಿಲ್ಲ.'' ಹಾಗೆಯೇ ವಿಶ್ವಸಂಸ್ಥೆಯ ವಿಶೇಷ ದೂತರಾಗಿ ಆಫ್ಘಾನಿಸ್ಥಾನಕ್ಕೆ ಆಗಮಿಸಿದ್ದ ಫ್ರಾನ್ಸಿಸ್ ವೆಂಡ್ರೆಲ್ ಆಫ್ಘಾನಿಸ್ಥಾನದ ಉತ್ತರ ಮೈತ್ರಿಕೂಟದ ಎಲ್ಲ ಮಿತ್ರಪಕ್ಷಗಳನ್ನೂ, ರಾಜಕೀಯ ನಾಯಕರನ್ನೂ ಮಾತನಾಡಿಸಿದರೂ ಒಬ್ಬಳೇ ಒಬ್ಬ ಮಹಿಳೆಯನ್ನಾಗಲೀ, ಮಹಿಳಾ ಸಂಘಟನೆಗಳನ್ನಾಗಲೀ ಮಾತನಾಡಿಸಿಲ್ಲ. ಇದು ಮುಂಬರುವ ರಾಜಕೀಯ ಭವಿಷ್ಯತ್ತಿನ ಸೂಚನೆಯೇ?

ಇಂದು ಬಹಳಷ್ಟು ರಾಷ್ಟ್ರಗಳು, ಈಗ ನಡೆದ ಯುದ್ಧದ ವಿಜಯದಿಂದ ಬೀಗುತ್ತಿರುವವರು ಆಫ್ಘಾನಿಸ್ಥಾನದಲ್ಲಿ ತಮ್ಮ ರಾಜಕೀಯ ಅಜೆಂಡಾಗಳನ್ನು ಇಟ್ಟುಕೊಂಡಿದ್ದಾರೆ. ಭಾರತ ಸರ್ಕಾರವೂ ಉತ್ತರ ಮೈತ್ರಿಕೂಟದೊಂದಿಗೆ ಸ್ನೇಹಭಾವದಿಂದಲೇ ಇರುವುದರಿಂದ ಅಲ್ಲಿನ ಸರ್ಕಾರದೊಂದಿಗೆ ಮಹಿಳೆಯರ ಪರವಾದ ಗಟ್ಟಿದನಿಯನ್ನು ಎತ್ತುವುದೇ? ಬಾನ್‌ನಲ್ಲಿ ನಡೆದ ಸಮಾಲೋಚನಾ ಸಭೆಗೂ ಮಹಿಳಾ ಹೋರಾಟಗಾರರನ್ನಾಗಲಿ, ನಿಜವಾದ ಮಹಿಳಾ ಪ್ರತಿನಿಧಿಗಳನ್ನಾಗಲೀ ಆಹ್ವಾನಿಸಿರಲಿಲ್ಲ. ಅಮೆರಿಕಾದ ರಾಜ್ಯ ಕಾರ್ಯದರ್ಶಿ ಕೋಲಿನ್ ಪೋವೆಲ್ ಮಹಿಳೆಯರನ್ನೂ ಯೋಜನೆ ಮತ್ತು ಆಡಳಿತದಲ್ಲಿ ಒಳಗೊಳ್ಳಬೇಕು ಎಂದು ಹೇಳಿರುವರಾದರೂ ಇದನ್ನು ಹೇಗೆ ಸಮರ್ಪಕವಾಗಿ ಮಾಡಬಲ್ಲರು, ಎಂದು ಕಾದು ನೋಡಬೇಕಾಗಿದೆ. ಈ ಪ್ರಕ್ರಿಯೆಗಳಲ್ಲಿ RAWA ಮತ್ತು ಇತರ ಹೋರಾಟಗಾರ್ತಿ ಮಹಿಳೆಯರ ಸಲಹೆ, ಸೂಚನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಮುಂಬರುವ ಸಂವಿಧಾನದಲ್ಲಿ ಮತ್ತು ಶಾಸನಗಳಲ್ಲಿ ಮಹಿಳೆಯರ ಹಕ್ಕುಗಳನ್ನು ರಕ್ಷಿಸಬೇಕು. ಇಲ್ಲದಿದ್ದರೆ ಹಿಂದಿನ ಎಲ್ಲ ಘಟನೆಗಳು ಮರುಕಳಿಸುವುದಿಲ್ಲ ಎನ್ನುವುದು ಹೇಗೆ?

◆

ರಾಸಿಲ್ ಬಸು ವಿಶ್ವಸಂಸ್ಥೆಯಲ್ಲಿ 'ಮಾನವ ಹಕ್ಕುಗಳು' ಮತ್ತು 'ಮಹಿಳೆಯರ ಸ್ಥಿತಿಗತಿಗಳನ್ನು ಕುರಿತಂತೆ ಮೂವತ್ತು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಮಹಿಳಾ ದಶಕಕ್ಕೆ (1975-85) ಸಂಬಂಧಪಟ್ಟ ಕ್ರಿಯಾಯೋಜನೆ ಮತ್ತು ಕರಡು ಪ್ರತಿಯನ್ನು ಸಿದ್ಧಗೊಳಿಸಿದವರು ಇವರು. ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆಯ ಅಂಗವಾಗಿ ಎರಡು ವರ್ಷಗಳ ಕಾಲ ಆಫ್ಘಾನಿಸ್ಥಾನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು 1986-88ರಲ್ಲಿ ಆಫ್ಘಾನಿಸ್ಥಾನದಲ್ಲಿದ್ದವರು. ಅವರು ಏಷ್ಯನ್ ಏಜ್‌ನಲ್ಲಿ ಬರೆದ ಲೇಖನದ ಸಂಗ್ರಹ ರೂಪ ಇದು.

ಒಂದೇ ಮುಖ, ಎಂಟು ಧ್ವನಿಗಳು

ಸಂಪ್ರದಾಯ, ಧರ್ಮ, ಕಾನೂನು ಮತ್ತು ಕೌಟುಂಬಿಕ ಹಿಂಸೆಗೆ ಬಲಿಯಾದ ಪ್ರಪಂಚದ ಹಲವಾರು ರಾಷ್ಟ್ರ, ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಎಂಟು ಮಹಿಳೆಯರನ್ನು ರಂಗದ ಮೇಲೆ ತಂದ ಸಾಹಸ, ಸಾರಾ ಜೋನ್ಸ್‌ಳ "Women can't wait'. ಈ ಪ್ರಯೋಗದಲ್ಲಿ ಎಂಟು ರಾಷ್ಟ್ರಗಳ, ಎಂಟು ಸಂಸ್ಕೃತಿಗಳ, ಎಂಟು ವ್ಯಕ್ತಿಗಳ ಅನುಭವ ನಮ್ಮ ಕಣ್ಣ ಮುಂದೆ ಬರುತ್ತದೆ. ಆದರೆ ಈ ಅಪೂರ್ವ ಅನುಭವವನ್ನು ಕೊಟ್ಟ ಕಲಾವಿದೆ ಒಬ್ಬಳೇ. ಅದೇ ಸಾರಾಜೋನ್ಸ್ - ಆ ಎಲ್ಲಾ ವೈವಿಧ್ಯಗಳ ಮೂಲದಲ್ಲಿದ್ದ ಏಕತಾನ 'ಹೆಣ್ಣಿನ ನೋವು'.

ಅಪೂರ್ವ ನಟನಾಸಾಮರ್ಥ್ಯವನ್ನು ಹೊಂದಿರುವ ಸಾರಾ ಒಂದು ಪಾತ್ರದಿಂದ ಮತ್ತೊಂದು ಪಾತ್ರಕ್ಕೆ ಜಿಗಿಯುತ್ತಾ, ರಂಗದ ಮಿತಿಯೊಳಗೇ ಅಭಿನಯಿಸಿದ Women Cant wait ಏಕಪಾತ್ರಾಭಿನಯದ ಪಠ್ಯ ಅವರೇ ಬರೆದು ನಿರ್ದೇಶಿಸಿದ್ದು. ಈ ಎಂಟು ಮಂದಿಯೂ ವಿಶ್ವಸಂಸ್ಥೆಗೆ ಬಂದು ತಮ್ಮ ಅನುಭವಗಳನ್ನು ಹೇಳಿಕೊಂಡಂತೆ - ಭಾರತ, ಜಪಾನ್, ಕೆನ್ಯಾ, ಜೋರ್ಡಾನ್, ಫ್ರಾನ್ಸ್, ಉರುಗ್ವೇ, ಇಸ್ರೇಲ್ ಮತ್ತು ಬ್ರೂಕ್‌ಲೀನ್, ನ್ಯೂಯಾರ್ಕ್ ಈ ಎಂಟು ಮಹಿಳೆಯರಿಗೆ ತಮ್ಮ ದೇಶದ ಕಾನೂನು ಕಾಡಿದ್ದು ವಿವಿಧ ರೀತಿಯಲ್ಲಿ. ಒಂದು ದೇಶದಲ್ಲಿ ಅತ್ಯಾಚಾರ ಮಾಡಿ ಅಪರಾಧಿ ಆ ಹೆಣ್ಣನ್ನೇ ಮದುವೆಯಾಗಿ ಕಾನೂನಿನಿಂದ ಪಾರಾಗುತ್ತಾನೆ, ಮತ್ತೊಂದು ರಾಷ್ಟ್ರ 'ಮರ್ಯಾದಾ ಹತ್ಯೆ'ಯ ಹೆಸರಿನಲ್ಲಿ ಮಗಳು ತಂಗಿಯರು ಮತ್ತು ಹೆಂಡತಿಯರನ್ನು ಕೊಲೆ ಮಾಡಿದ ಪುರುಷರನ್ನು ಪಾರು ಮಾಡುತ್ತದೆ. ಗಂಡನ ಅನುಮತಿಯಿಲ್ಲದೆ ವಿವಾಹ ವಿಚ್ಛೇದನ ಕೇಳಲಾಗುವುದಿಲ್ಲವೆಂದು ಮತ್ತೊಂದು ಕಾನೂನು ಹೇಳುತ್ತದೆ. ಹೀಗೆ ಸಾರಾಳ ಪ್ರತಿಯೊಂದು ಕತೆಯು ಹೆಣ್ಣಿನ ನೋವಿನ ಕತೆಯಾಗಿರುವುದಷ್ಟೇ ಅಲ್ಲದೆ, ಆ ನೋವಿಗೆ ಕಾರಣವಾದ ಕಾನೂನನ್ನು ಬದಲಾಯಿಸಬೇಕೆಂದು ಒತ್ತಾಯಿಸುತ್ತದೆ.

ಈ ಅಭಿನಯಕ್ಕೆ ಸಾರಾ ಬಳಸುವ ಪ್ರಾಪರ್ಟಿ ಒಂದೇ. ಒಂದು ಸ್ಕಾರ್ಫ್. ಇದೊಂದನ್ನೇ ಬಳಸಿ ಸಾರಾ ತನ್ನನ್ನೇ ಎಂಟು ಪಾತ್ರಗಳಿಗೆ ಪರಿವರ್ತಿಸಿಕೊಂಡು ಬಿಡುತ್ತಾರೆ. ಒಂದರ ನಂತರ ಮತ್ತೊಂದು ನಿಜವಾದ ಕುಶಲ ಕರ್ಮಿಯ ಚಳಕದಲ್ಲಿ ಪಾತ್ರಗಳು ಮೂಡುತ್ತಾ ಹೋಗುತ್ತವೆ. ಜೊತೆಗೆ ಕಥೆ ಹೇಳುವ ಕಥನ ಶೈಲಿಯು ಜೊತೆ ಸೇರಿ ಒಟ್ಟಾರೆ ಪರಿಣಾಮಕಾರಿ ಅನುಭವವನ್ನು ಪ್ರೇಕ್ಷಕರಿಗೆ ನೀಡುತ್ತದೆ. ಸ್ಕಾರ್ಫ್‌ನಿಂದ ತಲೆಯನ್ನು ಮುಚ್ಚಿಕೊಂಡು ಅವಳು ಭಾರತದ ಪ್ರವೀಣ್ ಆಗುತ್ತಾಳೆ. ಒಬ್ಬ ಪುಕ್ಕಲು ಹುಡುಗಿಯಾದ ಇವಳು ತನಗೆ ಒದಗಿ ಬಂದ ವಿವಾಹದ ಅತ್ಯಾಚಾರವನ್ನು ಕುರಿತು ಮಾತನಾಡುತ್ತಾಳೆ. ಅವಳ ಕುಟುಂಬದಲ್ಲೇ ಅವಳಿಗೆ ಸಂತಾಪ ಸೂಚಿಸುವವರಿಲ್ಲ. ನಂತರ ಅದೇ ಸ್ಕಾರ್ಫ್‌ನ್ನು ಕೊರಳ ಸುತ್ತ ಸುತ್ತಿಕೊಂಡು ಫ್ರಾನ್ಸ್‌ನ ಎಮರಾಡ್ ಆಗುತ್ತಾಳೆ. ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುವ ಅವಳು ಕಾನೂನನ್ನು ಉಲ್ಲಂಘಿಸಿ ಅವಳಿಗೆ ತೊಂದರೆ ಕೊಡುವ ಮಾಲೀಕರ ಬಗ್ಗೆ ಮಾತನಾಡುತ್ತಾಳೆ. ಇನ್ನೊಂದು ಕ್ಷಣ ಜಪಾನಿನ ಟಿಮೋಕೊ ಆಗುತ್ತಾಳೆ, ವಿವಾಹ ವಿಚ್ಛೇದನದ ಹಕ್ಕಿಗಾಗಿ ಮಾತನಾಡುತ್ತಾಳೆ. ಕೂಡಲೇ ಜೊರ್ಡಾನ್‌ನ ಹಾಲಾ ಆಗಿ ಅವಳ ನಾಡಿನಲ್ಲಿ ನಡೆಯುತ್ತಿರುವ 'ಮರ್ಯಾದಾ ಹತ್ಯೆ'ಯ ಹೆಸರಿನ ಹೆಣ್ಣು ಮಕ್ಕಳ ಕೊಲೆಗಳನ್ನು ನಿಲ್ಲಿಸಲು ಪ್ರಾರ್ಥಿಸುತ್ತಾಳೆ. ಹೀಗೆ ಕ್ಷಣಕ್ಕೊಂದು ಪಾತ್ರಗಳನ್ನು ಬದಲಾಯಿಸುತ್ತಾ ಉರುಗ್ವೆಯ ಅಮಾ, ಅಮೆರಿಕೆಯ ಬೋನಿಟಾ, ಇಸ್ರೇಲ್‌ನ ಶೀರಾ ಆಗುತ್ತಾಳೆ. ಕೊನೆಗೆ ಕೆನ್ಯಾದ ಪುಟ್ಟ ಹುಡುಗಿ 'ಅನ್ನಾ' ಆಗಿ ಅವಳು ಸುತ್ತಿಕೊಂಡಿದ್ದ ಸ್ಕಾರ್ಫ್‌ನ್ನು ಒಂದು ಚಿಕ್ಕ ಬೊಂಬೆ ಮಾಡುತ್ತಾಳೆ.

ಒಟ್ಟು ನಾಟಕ ಯಾವ ಸಿದ್ಧಾಂತವನ್ನು ಹೇಳದಿದ್ದರೂ ವೈಯಕ್ತಿಕ ಮಟ್ಟದಲ್ಲಿ ಈ ಪಾತ್ರಗಳು ಅನ್ಯಾಯದ ಭಯಾನಕ ಅನುಭವವನ್ನು ಕಥೆಯಾಗಿ ಹೇಳುತ್ತವೆ. ''ನಾವು ನಮ್ಮ ಬದುಕಿನಲ್ಲಿ ಇಂತಹ ಹಲವಾರು ಪಾತ್ರಗಳನ್ನು ಮುಖಾಮುಖಿಯಾಗಿ ಭೇಟಿ ಮಾಡುತ್ತಿರುತ್ತವೆ, ಅಥವಾ ನಮ್ಮಲ್ಲೇ ಕೆಲವರು 'ಇಂತಹ ನೋವುಗಳನ್ನು ಉಂಡಿರಲೂ ಸಾಕು'' ಎನ್ನುತ್ತಾರೆ ಸಾರಾ.

ಬಹುವರ್ಣೀಯ ಕುಟುಂಬದಲ್ಲಿ ಬಾಲ್ಟಿಮೋರ್‌ನಲ್ಲಿ ಜನಿಸಿದ ಸಾರಾ, ಕಪ್ಪು ಮಹಿಳೆಯರ ಅಪಮಾನ, ನೋವುಗಳನ್ನು ಬದುಕಿನಲ್ಲಿ ಅನುಭವಿಸಿದವಳು. ಆದ್ದರಿಂದಲೇ ಮಹಿಳಾ ಪ್ರಶ್ನೆಗಳಿಗೆ ಅತ್ಯಂತ ತೀವ್ರವಾಗಿ ಸ್ಪಂದಿಸುವ ಸಂವೇದನಾಶೀಲೆಯಾಗಿ ಸಾರಾ ನಮಗೆ ಮುಖ್ಯಳಾಗುತ್ತಾಳೆ. ಅವಳ ಮೊದಲ ನಾಟಕ Surface Transet ಎಂಟು ನ್ಯೂಯಾರ್ಕಿನ ಪಾತ್ರಗಳನ್ನು ಒಳಗೊಂಡಿತ್ತು. ಸಂಮಿಶ್ರವಾಗಲು ಅಸಾಧ್ಯವೆನ್ನಬಹುದಾದ ಎಂಟು ವಿವಿಧ ವರ್ಣಮೂಲಗಳಿಗೆ ಸೇರಿದ ಮಹಿಳೆಯರ ಬದುಕು, ವ್ಯಥೆಯನ್ನು ಕುರಿತ ಈ ನಾಟಕದ ಜನಪ್ರಿಯತೆ ಮತ್ತು ಯಶಸ್ಸು ಸಾರಾಳ ಮುಂದಿನ ನಾಟಕಗಳಿಗೆ ನಾಂದಿಯಾಯಿತು.

Women's can't wait ನಾಟಕವು ವಿಶ್ವದಾದ್ಯಂತ ಇರುವ ಹಲವು ಸಮಾಜಗಳಲ್ಲಿನ ಕಾನೂನಿನ ಜೀವ ಮತ್ತು ಅಂತಸ್ಸತ್ವಗಳನ್ನು ಅಲ್ಲಾಡಿಸಿ ಅದು ಹೇಗೆ ಮಹಿಳೆಯರಿಗೆ ಬೇಧಭಾವವನ್ನು ತೋರುತ್ತದೆ, ಎಂಬುದನ್ನು ಮನಮುಟ್ಟುವಂತೆ ಬಿಚ್ಚಿಡುತ್ತದೆ. ಸಾರಾ ಅವರ ಅಭಿನಯಕ್ಕೆ ಮಂತ್ರಮುಗ್ಧರಾಗುವ ಪ್ರೇಕ್ಷಕರು ನಾಟಕ ಅಭಿವ್ಯಕ್ತಿಸುವ ತರ್ಕಕ್ಕೆ ತಲೆದೂಗಲೇ ಬೇಕು.

ಕೃಪೆ : ಡೆಕ್ಕನ್ ಹೆರಾಲ್ಡ್

ಗಾಣಿಗಿತ್ತಿ ಅಯ್ಯೋ ಎಂದರೆ.....

ಕಳೆದ ವಾರ, ಅಂದರೆ ನವೆಂಬರ್‌ನಲ್ಲಿ 'ಬವಂದರ್' ಚಿತ್ರದ ಪ್ರೀಮಿಯರ್ ಷೋ ಇತ್ತು. ರಾಜ್ಯಾಂಗದ ಉನ್ನತ ಅಧಿಕಾರಿಗಳು ವರಿಷ್ಠ ಪೋಲೀಸ್ ಅಧಿಕಾರಿಗಳು ಘಟಾನುಘಟಿಗಳು 'ಬವಂದರ್' ನೋಡಲು ಒಂದಿಷ್ಟು ಸಮಯ ಬಿಡುವು ಮಾಡಿಕೊಂಡರು. ಪ್ರೀಮಿಯರ್ ಷೋ ಇದ್ದದ್ದು ರಾಜಸ್ಥಾನದ ರಾಜಧಾನಿ ಜಯಪುರದಲ್ಲಿ.

ಬಾಂವರಿ ದೇವಿ ನಿಮಗೆಲ್ಲಾ ನೆನಪಿರಬೇಕಲ್ಲವೆ? ಆ ಬಾಂವರಿ ದೇವಿಯ ಬವಣೆಯೇ ಈ ಬವಂದರ್. ಬವಂದರ್ ಎಂದರೆ ಬಿರುಗಾಳಿ. ಚಂಡಮಾರುತ ಎಂತಲೂ ಹೇಳಬಹುದು. ಈ ಚಂಡಮಾರುತದ ಸುಳಿಗೆ ಸಿಕ್ಕಿಕೊಂಡಿರುವ ಬಾಂವರಿದೇವಿ ಇನ್ನೂ ಈಚೆ ಬಂದೇ ಇಲ್ಲ. ಈ ಸುಳಿಯಲ್ಲಿ ಅವಳ ಗಂಡು ಮಕ್ಕಳು ಸಹ ಸುತ್ತುತ್ತಿದ್ದಾರೆ.

1992ರಲ್ಲಿ ಐದು ಮಂದಿ ಮೇಲ್ವರ್ಗದ ರೈತರಿಂದ ಬಾಂವರಿದೇವಿಯ ಅತ್ಯಾಚಾರವಾಯಿತು. ಆದರೆ ಅವರನ್ನೂ ಸೆಷನ್ಸ್ ನ್ಯಾಯಾಲಯ 'ದೋಷಮುಕ್ತ'ರೆಂದು ಹೇಳಿ ಖುಲಾಸೆ ಮಾಡಿತು. 1996ರಲ್ಲಿ ಸಿಬಿಐ ಹೈಕೋರ್ಟಿಗೆ ಅವಳ ಹೆಸರಿನಲ್ಲಿ ಅರ್ಜಿ ಸಲ್ಲಿಸಿದೆ. ಇನ್ನೇನು ಐದು ವರ್ಷಗಳಾಗುತ್ತ ಬಂದಿದೆ. ಒಂದೇ ಒಂದು ಹಿಯರಿಂಗ್ ನಡೆದಿಲ್ಲ.

ಈ ಮಧ್ಯೆ ಅವಳ ಮೇಲೆ ಅತ್ಯಾಚಾರ ಮಾಡಿದವರ ಕಾಟ ಮುಂದುವರಿದೇ ಇದೆ. ಈ ಕಾಟ ಅಪಮಾನಗಳನ್ನು ಸಹಿಸಲಾಗದೆ ಅವಳ ದೊಡ್ಡ ಮಗ ಮನೆ ಬಿಟ್ಟು ದೂರ ಹೋಗಿ ನೌಕರಿ ಮಾಡುತ್ತಿದ್ದಾನೆ. ಕಾಲೇಜಿನಲ್ಲಿ ಮೊದಲನೆಯ ವರ್ಷ ಓದುತ್ತಿರುವ ಎರಡನೆಯ ಮಗನಿಗೆ ತರಗತಿಗೆ ಹೋಗುವುದೇ ಅಸಾಧ್ಯವಾಗಿದೆ. ಅವನ ಸಹಪಾಠಿಗಳು ಅವಹೇಳನಕಾರೀ ಹೆಸರುಗಳನ್ನಿಟ್ಟು ಕರೆಯುವುದರಿಂದ ಆತ ಮನೆಯಲ್ಲೇ ಕೂರುತ್ತಾನೆ. ಇನ್ನು ಮಗಳ ಪಾಡನ್ನೂ ಹೇಳುವುದೇ ಬೇಡ. ಅದೂ ಮದುವೆಯಾಗಿ ಅತ್ತೆಯ ಮನೆಯಲ್ಲಿರುವ ಮಗಳು!! 'ಬವಂದರ್' ನೋಡಿದ ಮೇಲಾದರೂ ಜನಕ್ಕೆ ಅವಳ ಬಗ್ಗೆ ತುಸು ಕನಿಕರ ಮೂಡಿರಬಹುದೇ? 'ಛೆ' ಎಂದಾದರೂ ಉದ್ಗಾರ ಹೊರಡಿಸಿರಬಹುದೇ?

''ಇಲ್ಲ'' ಎನ್ನುತ್ತಾಳೆ ಬಾಂವರಿದೇವಿ. ಬದಲಿಗೆ ಅವಳ ಮೇಲೆ ಅವರ ಸಿಟ್ಟು-ತಾತ್ಸಾರ ಹೆಚ್ಚಿದೆ. 'ಮೊದಲೇ ಹಳ್ಳಿಯಲ್ಲಿ ಬಿರುಗಾಳಿ ಎಬ್ಬಿಸಿಬಿಟ್ಟಳು ಎಂದು ನನ್ನನ್ನು ಹೀಯ್ಯಾಳಿಸುತ್ತಿದ್ದರು. ಈಗ ಈ ಸಿನಿಮಾ ನೋಡಿದ ಮೇಲಂತೂ, ಎರಡೆರಡು ಬಾರಿ ಚರ್ಮ ಸುಲಿಸಿ ಕೊಂಡಂತಹ ಅನುಭವ! ಭತೇರಿ - ಬಾಂವರಿದೇವಿ ಇರುವ ಹಳ್ಳಿ. 'ಹಿಂದುಳಿದ ಹಳ್ಳಿ' ಎಂದು ಹೇಳಬೇಕಾಗಿಯೇ ಇಲ್ಲ. ಅಲ್ಲಿರುವ ಅನುಕೂಲಸ್ಥರೇ. ಗುಜ್ಜರ್ ಮತ್ತು ಬ್ರಾಹ್ಮಣ ಸಮುದಾಯದವರು. ಇವರ್‍ಯಾರಿಗೂ ಬಾಂವರಿದೇವಿಗಾದ ಅನ್ಯಾಯ ಲೆಕ್ಕಕ್ಕೇ ಇಲ್ಲ. 'ಈ ಚಿತ್ರ ಮಾಡಿರುವುದೇ ನಮ್ಮ ಹಳ್ಳಿಗೇ ಮಸಿ ಬಳೆಯುವುದಕ್ಕಾಗಿ. ಇವಳು ನಮ್ಮ ಇಡೀ ಹಳ್ಳಿಗೇ ಅಪಮಾನ ಮಾಡಿದ್ದಾಳೆ' ಎಂದು ಇವರು ಹೀಗಳೆಯುತ್ತಾರೆ.

''ಅವಳಿಗೆ ಮಾನ ಮರ್ಯಾದೆ ಎಂಬುದೇ ಇಲ್ಲ. ಪಾಪ, ಅವರನ್ನು (ಅತ್ಯಾಚಾರಿಗಳನ್ನು) ಈ ಕೇಸ್‌ನಲ್ಲಿ ಸಿಲುಕಿಸಿದ್ದಾಳೆ. ಇದರಿಂದ ಹೊರಬರಲು ಅವರು ಲಕ್ಷಗಟ್ಟಲೆ ಹಣ ಖರ್ಚು ಮಾಡಬೇಕಾಯಿತು. ಅವರ ಪೈಕಿ ಇಬ್ಬರಂತೂ ಆ ಘಟನೆ ನಡೆಯಿತು ಎನ್ನುತ್ತಾಳಲ್ಲ ಅಂದು ಊರಿನಲ್ಲೇ ಇರಲಿಲ್ಲ. ಎಲ್ಲಾ ಇವಳೇ ಹುಟ್ಟು ಹಾಕಿದ ಕತೆ. ಪ್ರಸಂಗ'' ಎನ್ನುತ್ತಾರೆ.

ಬಾಂವರಿದೇವಿಗೆ ಜೀವನ ದುರ್ಭರವಾಗಿದೆ. ಇರುವ ಒಂದು ಎಮ್ಮೆಯಿಂದ ಅಷ್ಟೋ ಇಷ್ಟೋ ಆದಾಯ. ಎರಡು ತುಂಡು ನೆಲವೇನೋ ಇದೆ. ಆದರೆ ಮೂರು ವರ್ಷಗಳಿಂದ ಬರ. ನೀರಜಾ ಭಾನೋಟ್ ಪ್ರಶಸ್ತಿ ಮೂಲಕ ಒಂದು ಲಕ್ಷ ರೂಪಾಯಿ ಬಂದಿತ್ತು. ಆದರೆ ಅದು ಮಹಿಳೆಯರ ಸಹಾಯಕ್ಕೆಂದು ಮೀಸಲಾದ ದತ್ತಿಯಲ್ಲಿ ಸೇರಿಕೊಂಡಿದೆ. ಈ ಹಣದಿಂದ ಏನು ಮಾಡಬೇಕೆಂದು ಮಹಿಳಾ ಸಂಘಟನೆಗಳು ಇನ್ನೂ ಏನೂ ತೀರ್ಮಾನಿಸಿಲ್ಲವಂತೆ. ಒಟ್ಟಿನಲ್ಲಿ 1994ರಿಂದ 'ಈ' ಹಣ 'ಅಲ್ಲಿ' ಭದ್ರವಾಗಿ ಕುಳಿತಿದೆ.

ಇತ್ತ ಬಾಂವರಿದೇವಿ ತನ್ನ ಪಾಡಿಗೆ ರೊಟ್ಟಿ ಬೇಯಿಸುತ್ತಾ ಕುಳಿತಿದ್ದಾಳೆ. 'ನ್ಯಾಯಕ್ಕಾಗಿ, ಶೋಷಿತ ಮಹಿಳೆಯರಿಗಾಗಿ ಹೋರಾಡಿದೆ. ನನಗೇನು ಸಿಕ್ಕಿತು?' ಎನ್ನುತ್ತಾಳೆ. ಅತ್ತ ಸಿನಿಮಾ ನೋಡಿದವರು, 'ಪಾಪ'! ಎನ್ನುತ್ತಾರೆ. 'ವ್ಹಾ' ಎನ್ನುತ್ತಾರೆ.

- ಹೆಚ್. ಎಸ್. ಗೀತಾ

ಅಕ್ಕ



ಇತರೆ ಎಲ್ಲರಿಗಿಂತ ಹೆಚ್ಚಾಗಿ ಹೆಣ್ಣು ನಮ್ಮ ಸಮಾಜದ ನಿಜವಾದ ಸಾಂಸ್ಕೃತಿಕ ವಾರಸುದಾರಳು. ಕನ್ನಡದ ಹೆಚ್ಚಿನ ಜಾನಪದ ಕಾವ್ಯಗಳು, ಹೆಚ್ಚಿನ ಚಿತ್ತಾರಗಳು, ಜೀವನಶೈಲಿ, ಊಟ, ಉಪಚಾರ, ನಡೆ-ನುಡಿ, ಹಬ್ಬ-ಹರಿದಿನ, ಸೌಜನ್ಯ ಎಲ್ಲವನ್ನೂ ಜೀವಂತವಾಗಿಟ್ಟಿರುವುದು ಹೆಣ್ಣೇ ಹೌದು. ಹಾಗಾಗಿ ಮಹಿಳೆಯರ ಮಟ್ಟಿಗೆ ಹೇಳುವುದಾದರೆ ಸಂಸ್ಕೃತಿ ಎಂಬುದು ಚಳುವಳಿಯೂ ಹೌದು; ಅಭಿವ್ಯಕ್ತಿ ಎಂಬುದು ಬದಲಾವಣೆಯ ಅಸ್ತ್ರವೂ ಹೌದು.

ದುರ್ದೈವವೆಂದರೆ ಪುರುಷ ಪ್ರಧಾನ ಸಮಾಜ ಆಕೆಯನ್ನು ಬಂಧಿಸಿಟ್ಟಿರುವುದು ಕೂಡ ಇದೇ ಸಾಂಸ್ಕೃತಿಕ ಪಾಶಗಳನ್ನು ಬಳಸಿ. ಪ್ರಧಾನ ಸಂಸ್ಕೃತಿ ಎಂಬುದು ಶಾಸ್ತ್ರಗಳಾಗಿ, ಸಿದ್ಧಾಂತಗಳಾಗಿ, ಹಾಡು, ಕತೆ, ಪುರಾಣಗಳ ಕಂತೆ ಕಂತೆಗಳಾಗಿ ಆಕೆಯನ್ನು ಹದ್ದು ಬಸ್ತಿನಲ್ಲಿಟ್ಟಿದೆ. ಅಷ್ಟೇ ಏಕೆ, ದೇವರ ಕಲ್ಪನೆಯೂ ಕೂಡ ಎಷ್ಟೋ ಬಾರಿ ಹೆಂಗಸರನ್ನು ಹದ್ದು ಬಸ್ತಿನಲ್ಲಿಡಲು ಹೆಣಗಿದ್ದಿದೆ.

ದೈಹಿಕಹಲ್ಲೆ ಎಂಬುದು ಹೆಣ್ಣಿಗೆ ಆಗಾಗ ಒದಗುವ ಅಪವಾದ ಅಥವಾ ಅಪಮಾನ ಮಾತ್ರ. ಆದರೆ ಮಾನಸಿಕ ಹಿಂಸೆ ಹಾಗೂ ಸಾಂಸ್ಕೃತಿಕ ಕಟ್ಟುಪಾಡೆಂಬುದು ಸಾರ್ವತ್ರಿಕವಾದ ಹಾಗೂ ನಗುಮುಖದ ನರಕವಾಗಿದೆ ಆಕೆಗೆ.

ಸಾಂಸ್ಕೃತಿಕ ಹಲ್ಲೆಯ ವಿರುದ್ಧ ಮೊದಲು ಬಂಡೆದ್ದ ಕವಯಿತ್ರಿ ಅಕ್ಕಮಹಾದೇವಿ. ಅನಂತರ ಹಲವು ಅಕ್ಕಂದಿರು ಅಷ್ಟಿಷ್ಟು ವಿಸ್ತರಿಸಲು ಹೆಣಗಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಭಾರತೀಯ ರಂಗಭೂಮಿಯಲ್ಲಿ ಹೆಂಗಸರು ಸಾಧಿಸಿರುವ ಪ್ರಗತಿ ಅಸಾಧಾರಣವಾದುದ್ದು. ರಂಗಭೂಮಿ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮ. ವ್ಯಾಪಾರಿ ಸೀಮಿತ ರೀತಿಯಲ್ಲಿ ಸತ್ಯ ಚಿತ್ರಿಸಲು ಹೆಣಗಿರುವ ಮಾಧ್ಯಮ ರಂಗಭೂಮಿ. ಹೆಣ್ಣು ರಂಗಮಾಧ್ಯಮದಲ್ಲಿ ಸಾಧಿಸಿರುವ ಹಿರಿಮೆ ಇಡೀ ಸಮಾಜದಲ್ಲಿ ಆಕೆ ಸಾಧಿಸಬೇಕಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ದಾರಿ ತೋರಿಸುತ್ತದೆ ಎಂಬುದು ನಮ್ಮ ನಂಬಿಕೆ. ಹಾಗಾಗಿ ಈ ಉತ್ಸವ ಹಾಗಾಗಿ ಅಕ್ಕನ ಹೆಸರು.

- ರಂಗಾಯಣ ಪತ್ರಿಕೆಯಿಂದ

'ಅಕ್ಕ'ನ ಒಳಗುದಿ

ನವೆಂಬರ್‌ನಲ್ಲಿ ಮೈಸೂರಿನಲ್ಲಿ ರಂಗಾಯಣದವರು ಯೋಜಿಸಿದ್ದ 'ಅಕ್ಕ' ರಾಷ್ಟ್ರೀಯ ನಾಟಕೋತ್ಸವ ಒಂದು ಅಪರೂಪದ ಪ್ರಯತ್ನ. ಮಹಿಳಾಕಾಳಜಿಗಳನ್ನೇ ಮುಖ್ಯ ವಿಷಯವಾಗಿಸಿಕೊಂಡ ಸಾಂಸ್ಕೃತಿಕ ಅಭಿವ್ಯಕ್ತಿಯ ವಿಶಿಷ್ಟ ಪ್ರಯೋಗವಿದು. ಇಲ್ಲಿ ಏಕವ್ಯಕ್ತಿ ಪ್ರದರ್ಶನಗಳಿದ್ದವು. ಬೀದಿ ನಾಟಕಗಳಿದ್ದವು. ಅದ್ಭುತ ತಾಂತ್ರಿಕತೆಯನ್ನುಳ್ಳ ಪ್ರೋಸೀನಿಯಂ ನಾಟಕಗಳೂ ಅಭಿನಯಿಸಲ್ಪಟ್ಟವು. ಒಟ್ಟಾರೆಯಾಗಿ 29 ನಾಟಕಗಳು ಪ್ರದರ್ಶಿತವಾದವು. ಹೆಣ್ಣಿನ ವೈಯಕ್ತಿಕ ತುಮುಲ, ಕೌಟುಂಬಿಕ ಹಿಂಸೆ ಮತ್ತು ದೌರ್ಜನ್ಯ ಮತ್ತು ಸಾಮಾಜಿಕ ನೆಲೆಯಲ್ಲಿ ವಿವಿಧ ಪದರಗಳ ಶೋಷಣೆ ಎಲ್ಲವನ್ನೂ ಅಭಿವ್ಯಕ್ತಿಸಿದ್ದಷ್ಟೇ ಅವುಗಳಿಗೆ ಪ್ರತಿಭಟನೆಯ ನೆಲೆಗಳನ್ನೂ ರೂಪಿಸಿದ್ದು ಚಳುವಳಿಯ ಸ್ವರೂಪವನ್ನು ಕೊಟ್ಟಿತು. ಭಾರತದ ಬಹುಪಾಲು ಎಲ್ಲ ದೇಶೀಯ ಭಾಷೆಗಳ ನಾಟಕಗಳೂ ಇಲ್ಲಿ ಪ್ರದರ್ಶಿತವಾದವು. ಕನ್ನಡ, ಹಿಂದಿ, ಮಲೆಯಾಳಂ, ಮಣಿಪುರಿ, ಉರ್ದು, ತೆಲುಗು, ತಮಿಳು, ಇಂಗ್ಲಿಷ್, ಮರಾಠಿ, ಬೆಂಗಾಲಿ, ಗುಜರಾತಿ ಭಾಷೆಯ ನಾಟಕಗಳ ಮೂಲಕ ಭಾರತೀಯ ಹೆಣ್ಣಿನ ಒಳಗುದಿ ಮತ್ತು ಸಿಟ್ಟು ಅಭಿವ್ಯಕ್ತಗೊಂಡಿತು. ಒಟ್ಟು ನಾಟಕೋತ್ಸವ ನೆನಪಿನಲ್ಲಿ ಉಳಿಸುವ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ದಾಖಲಾಗಿಸಿದೆ.

ನಾಟಕೋತ್ಸವ ಎರಡನೇ ದಿನ ಪ್ರದರ್ಶಿತವಾದ 'ದ್ರೌಪದಿ-ಇಜ್ಜತ್' ಮತ್ತು 'ಸರಸಮ್ಮನ ಸಮಾಧಿ' ಯೆರಡೂ ತಮ್ಮ ಅಪೂರ್ವ ವೈಚಾರಿಕತೆ ಮತ್ತು ತಾಂತ್ರಿಕತೆಯ ಗುಣದಿಂದಾಗಿ ಹೆಣ್ಣಿನ ಶೋಷಣೆಯನ್ನು ಬಯಲುಗೊಳಿಸುತ್ತಲೇ ಗಂಡಿನ ಬೂಟಾಟಿಕೆಯನ್ನು ಬಯಲು ಮಾಡಿದವು. ಮಾನಸಿಕವಾಗಿ, ದೈಹಿಕವಾಗಿ ಪ್ರತಿಕ್ಷಣವೂ ಶೋಷಣೆಗೆ ಒಳಗಾಗುವ ಹೆಣ್ಣು ಬೆತ್ತಲಾಗಿ ಬೆತ್ತಲೆತನದ ಭೀಕರತೆಯನ್ನು ತೋರಿಸಿದಾಗ ಪುರುಷ ಅವಳೆದುರು ಅಸಹಾಯಕನಾಗಿ ತಾನೇ ಬೆತ್ತಲಾಗುತ್ತಾನೆ. ಆಕೆಯ ಅಂತಃಶಕ್ತಿಯ ಮುಂದೆ ನಪುಂಸಕನಾಗಿ ಬಿಡುತ್ತಾನೆ. ಕನ್ಹಯ್ಯಲಾಲ್ ನಿರ್ದೇಶನದ ದ್ರೌಪದಿ-ಇಜ್ಜತ್ ಮಣಿಪುರಿ ನಾಟಕ ಹಲವು ಕತೆಗಳನ್ನು ಒಟ್ಟು ಸೇರಿಸಿ ಮಾಡಿದ ನಾಟಕ. ಮುಖ್ಯವಾಗಿ ಇಲ್ಲಿನ ದ್ರೌಪದಿ ಮಹಾಶ್ವೇತಾದೇವಿಯವರ ಕತೆಯಿಂದ ಆಧಾರಿತ. ಶಿವರಾಮಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯಾಧಾರಿತ ಸರಸಮ್ಮನ ಸಮಾಧಿ ರಂಗಾಯಣ ಪ್ರದರ್ಶಿತ ಭಾಗೀರಥಿಬಾಯಿ ಕದಂರವರು ನಿರ್ದೇಶಿಸಿದ ನಾಟಕ. ದಾಂಪತ್ಯದ ವಿವಿಧ ಪದರಗಳಲ್ಲಿ

ಅಡಗಿರುವ ಹಿಂಸೆ, ವಂಚನೆ, ಅಪನಂಬಿಕೆಗಳನ್ನು ಪ್ರಶ್ನಿಸುತ್ತಲೇ ಇಲ್ಲಿ ಬಂಡಾಯದ ಭಾವವು ಹೆಣ್ಣಿನ ಒಳದನಿಯಾಗಿ ತೆರೆದುಕೊಳ್ಳುತ್ತದೆ.

ಅಕ್ಕ ನಾಟಕೋತ್ಸವವು ಆರಂಭವಾದದ್ದೇ ಜ್ಞಾನ ಪೀಠ ಪ್ರಶಸ್ತಿ ವಿಜೇತ ಬರಹಗಾರ್ತಿ ಕೃಷ್ಣ ಸೋಬ್ತಿಯವರ 'ಏ... ಲಡ್ಕೀ' ನಾಟಕದಿಂದ ತಾಯಗರ್ಭದಿಂದ ಹೊರ ಬಂದು ಯೌವನಾವಸ್ಥೆಯವರೆಗೆ ಅನುಭವಿಸಿದ ಜೀವನ ವಿಧಾನ, ವೃದ್ಧಾಪ್ಯದ ಸಂಕಟ, ಸಾವು ತರಲಿರುವ ಆತಂಕಗಳ ನಡುವೆ ಮಹಿಳೆಯ ಬದುಕಿನ ವಿಶ್ವರೂಪದ ದರ್ಶನವನ್ನು ಮಾಡುವ ಅಮ್ಮೊ ಪಾತ್ರ ಅಕ್ಕ ನಾಟಕೋತ್ಸವದ ಸಂಕೇತವಾಗಿತ್ತು. ಎನ್.ಎಸ್.ಡಿ. ಕಲಾವಿದರು ಹಿಂದಿಯಲ್ಲಿ ಅಭಿನಯಿಸಿದ ಈ ನಾಟಕ ಬಲಾತ್ಕಾರವಾಗಿ ಅದುಮಿಡಲಾಗಿರುವ ಹೆಣ್ಣಿನ ಭಾವನೆಗಳಿಗೆ ಧ್ವನಿ ಕೊಡುತ್ತದೆ. ಬಿಹಾರ್‌ದ ಮಂಚ್ ಆರ್ಟ್‌ಗ್ರೂಪ್ ತಂಡ ಕಲಾಮಂದಿರದಲ್ಲಿ ಪ್ರದರ್ಶಿಸಿದ 'ಬಿರ್ಜಿಸ್ ಕದರ್ ಕಾ ಕುನ್ಬಾ' ಹಿಂದಿ ನಾಟಕವು ಸಾಮಾಜಿಕ ಗೌರವದ ಹೆಸರಿನಲ್ಲಿ ಮಹಿಳೆಯರು ತಮ್ಮ ಸುತ್ತ ಕಟ್ಟಿಕೊಳ್ಳುವ ಗೋಡೆಯೊಳಗೆ ನಿರ್ಮಿಸಿಕೊಳ್ಳುವ ಹುಸಿ ಸಾಮ್ರಾಜ್ಯ ಎಂದಾದರೊಂದು ದಿನ ಕುಸಿಯಲೇ ಬೇಕು, ಸ್ವಾತಂತ್ರ್ಯದ ಕನಸು ಚಿಗುರೊಡೆಯುತ್ತದೆ, ಎಂಬುದನ್ನು ಹೇಳುವ ನಾಟಕ.

ಹೆಣ್ಣಿನ ಮೇಲಾಗುವ ದೌರ್ಜನ್ಯದ ಕರಾಳ ಮುಖವನ್ನು ಬಿಂಬಿಸುವ ಮಲೆಯಾಳಿ ಭಾಷೆಯ 'ಒರೋರು ಕಾಲತ್ತಿಲಂ.' ಈ ನಾಟಕದ ಮುಖ್ಯ ಪಾತ್ರವಾದ ತಾತ್ರಿ, ಮದುವೆಯ ಮೊದಲ ದಿನವೇ ಗಂಡನ ಹಿರಿಯಣ್ಣನಿಂದ ಬಲಾತ್ಕಾರಕ್ಕೆ ಒಳಗಾಗುತ್ತಾಳೆ. ತನ್ನ ಹತ್ತನೇ ವಯಸ್ಸಿನಲ್ಲಿ ಸಂಗೀತ ಹೇಳಿಕೊಡುವ ಗುರುಗಳಿಂದ ಆರಂಭಗೊಂಡ ಆಕೆಯ ಮೇಲಿನ ಲೈಂಗಿಕ ಹಲ್ಲೆ, ಇತರ ಅನೇಕ ಪುರುಷರಿಂದ ಎಲ್ಲೆಯಿಲ್ಲದೆ ಮುಂದುವರಿಯುತ್ತದೆ. ಸ್ವತಃ ತಾತ್ರಿಯ ಅಪ್ಪನೇ ಅವಳನ್ನು ಬಾಲ್ಯಾವ್ಯಸ್ಥೆಯಲ್ಲಿ ಭೋಗಿಸಿರುತ್ತಾನೆ. ಮದುವೆಯಾದ ಮೇಲೂ ತನ್ನನ್ನು ಬೆಂಬಿಡದ ಕಾಮ ಪಿಪಾಸುಗಳ ವಿರುದ್ಧ ಸೆಟೆದು ನಿಲ್ಲುವ ತಾತ್ರಿ, ಕೆಳಜಾತಿಯ ಮನೆಯ ಕೆಲಸದಾಕೆಯ ಸಹಾಯ ಪಡೆಯುವುದರೊಂದಿಗೆ ಮಹಿಳಾ ಹೋರಾಟಕ್ಕೆ ವರ್ಗಭೇದವಿಲ್ಲವೆಂಬುದನ್ನು ತೋರಿಸುತ್ತದೆ.

ಈ ಉತ್ಸವದಲ್ಲಿ ಪ್ರದರ್ಶಿತವಾದ ಎರಡು ಏಕವ್ಯಕ್ತಿ ಪ್ರದರ್ಶನಗಳು ಗಮನಾರ್ಹವಾದವು. ದೆಹಲಿಯ ಅಲರಿಪು ತಂಡ ಪ್ರದರ್ಶಿಸಿದ ಹಿಂದಿ ನಾಟಕ 'ಲೂನ' ನಟಿ ಸ್ವಪ್ನ ಸಂದಾಳ ಏಕವ್ಯಕ್ತಿ ಪ್ರದರ್ಶನ. ಪ್ರೀತಿಸಿದವನೊಬ್ಬ, ಆದರೆ ಮದುವೆಯಾಗಿ ಪ್ರೇಮಿಗೆ ಚಿಕ್ಕಮ್ಮನಾಗಬೇಕಾದ ದುರವಸ್ಥೆಗೆ ತಳ್ಳಲ್ಪಟ್ಟ ಪಂಜಾಬಿನ ಸುಂದರಿ ಲೂನಾಳ ಎದೆಯಾಳದ ಭಾವನೆಗಳನ್ನು ಸಮರ್ಥವಾಗಿ ಬಿಂಬಿಸುವ ನಾಟಕ. ಚಂದ್ರಶೇಖರ ಕಂಬಾರರ 'ಸಿಂಗಾರವ್ವ ಮತ್ತು ಅರಮನೆಯನ್ನು ಏಕವ್ಯಕ್ತಿ ಪ್ರದರ್ಶನಕ್ಕೆ ಅಳವಡಿಸಿಕೊಂಡು ಸೌಮ್ಯವರ್ಮಾರವ ನಿರ್ದೇಶನದಲ್ಲಿ ನಟಿ ಲಕ್ಷ್ಮೀಚಂದ್ರಶೇಖರ್ ಅಭಿನಯಿಸಿದ ನಾಟಕ ಸಿಂಗಾರೆವ್ವ ಮತ್ತು ಅರಮನೆ.

ಈ ಉತ್ಸವದಲ್ಲಿ ಪ್ರದರ್ಶನಗೊಂಡ ಬೀದಿ ನಾಟಕಗಳು ಉತ್ಸವದ ಒಂದು ಪ್ರಮುಖ ಅಂಗ. ದೇಶದ ವಿವಿಧ ಭಾಗಗಳಲ್ಲಿ ಪ್ರಸಿದ್ಧವಾದ ಬೀದಿ ನಾಟಕ ತಂಡಗಳು ಈ ಉತ್ಸವದಲ್ಲಿ ಭಾಗವಹಿಸಿದ್ದು ಪ್ರದರ್ಶನಕ್ಕೆ ಮೆರುಗುಕೊಟ್ಟಿತು. ಹೈದರಾಬಾದ್‌ನ ಪ್ರಜಾನಾಟ್ಯ ಮಂಡಳಿ ಪ್ರದರ್ಶಿಸಿದ 'ಬಂಜಾರಾ' ಬೀದಿ ನಾಟಕ ಪ್ರೇಕ್ಷಕರ ಮನಸ್ಸನ್ನು ಚಿಂತನೆಗೆ ತೊಡಗಿಸುವಲ್ಲಿ ಯಶಸ್ವಿಯಾಯಿತು. 60 ವರ್ಷಗಳ ಇತಿಹಾಸವಿರುವ ಕ್ರಾಂತಿಕಾರಿ ಕಾರ್ಯಕರ್ತರ ಸಾಂಸ್ಕೃತಿಕ ತಂಡವಾದ ಈ ಸಂಘಟನೆ 'ಬಂಜಾರಾ' ಅಲೆಮಾರಿ ಜನಾಂಗದ ಲಂಬಾಣಿಗಳ ಬದುಕಿನ ನೋವಿನ ಎಳೆಗಳನ್ನು ಬಿಡಿಸುವ ಪ್ರಯತ್ನವನ್ನು ಮಾಡಿದೆ. ಲಂಬಾಣಿಗಳ ಉದ್ಧಾರದ ಹೆಸರಿನಲ್ಲಿ ಬರುವ ಸ್ವಯಂ ಸೇವಾ ಸಂಸ್ಥೆಗಳು ಆ ಮುಗ್ಧ ಜನರನ್ನು ಶೋಷಿಸುವ ರೀತಿಯನ್ನು ಪರಿಣಾಮಕಾರಿಯಾಗಿ ಪ್ರಕಟಿಸುತ್ತದೆ.

ದೆಹಲಿಯ ಜನನಾಟ್ಯ ಮಂಚ್‌ನವರು ಅಭಿನಯಿಸಿದ 'ವೋ ಬೋಲ್ ಉಠಿ' ಮತ್ತು 'ಔರತ್' ನಾಟಕಗಳು ಅತ್ಯಂತ ಕಲಾತ್ಮಕವಾಗಿ ಹೆಣ್ಣಿನ ನೋವಿನ ವಿವಿಧ ಸ್ತರಗಳನ್ನು ಬಿಚ್ಚಿ ತೋರಿಸಿ ಅದರ ಒಡಲಲ್ಲೇ ಮೂಡಿಬರುವ ಪ್ರತಿಭಟನೆಯ ನೆಲೆಯನ್ನೂ ತೋರಿಸುತ್ತದೆ.

ಸಮುದಾಯದ 'ನ್ಯಾಯಕ್ಕಾಗಿ ಕಾದಿರುವ ಭ್ರಾಂವಿದೇವಿ', ರಾಯಚೂರಿನ ಸಮಖ್ಯಾದವರು ಅಭಿನಯಿಸಿದ 'ಅವ್ವ', ಧಾರವಾಡದ 'ಧಾರಕ', ಹೊಸಪೇಟೆಯ ಭಾವೈಕ್ಯತಾ ವೇದಿಕೆಯ 'ಅಕ್ಕ' ಎಲ್ಲಾ ನಾಟಕಗಳು ಮಹಿಳಾ ಕಾಳಜಿಗಳಿಗೆ ನಾಟಕ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಳ್ಳಬಹುದೆಂಬ ಸಾಧ್ಯತೆಯನ್ನು ಪುನರುಚ್ಚರಿಸಿದವು.

ಒಟ್ಟಿನಲ್ಲಿ ಈ ಉತ್ಸವವು ಮಹಿಳೆಯರ ನೋವುಗಳಿಗೆ ಕಿವಿ ಕೊಟ್ಟಿತು. ಪ್ರತಿಭಟನೆಯ ಕಿಚ್ಚಿಗೆ ದನಿಕೊಟ್ಟಿತು. ತನ್ಮೂಲಕ ರಂಗಾಯಣವು ತಾನು ಘೋಷಿಸಿಕೊಂಡಂತೆ ಮಹಿಳೆಯರ ಸಾಧನೆಯನ್ನು ಗುರುತಿಸಿತು ಮತ್ತು ಗೌರವಿಸಿತು.

- ಆಶಾ

ಅಪರೂಪದ ಸಾಕ್ಷರತಾ ಕಾರ್ಯಕ್ರಮ

ತೊಂಭತ್ತರ ದಶಕದ ಆರಂಭದಲ್ಲಿ ಸರ್ಕಾರದ ನೇತೃತ್ವದ ಸಾಕ್ಷರತಾ ಕಾರ್ಯಕ್ರಮಗಳು ಬಿರುಸಿನಿಂದ ನಡೆದವು. ಇದು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ತಮ್ಮ ಪರಿಕಲ್ಪನೆ, ಸಂಪನ್ಮೂಲ ಮತ್ತು ಅಗತ್ಯಗಳಿಗನುಗುಣವಾಗಿ ಯೋಜನೆಗಳನ್ನು ಕಾರ್ಯಗತ - ಗೊಳಿಸಿದವು. ಆಗ ಸರ್ಕಾರೇತರ ಸ್ವಯಂ ಸೇವಾಸಂಸ್ಥೆಗಳ ನೆರವು ಪಡೆದು ಒಂದು ವ್ಯಾಪಕ ಚಳುವಳಿಯನ್ನು ನಡೆಸಲಾಯಿತು. ಭಾರತ ಜ್ಞಾನ ವಿಜ್ಞಾನ ಸಮಿತಿಯ ನೇತೃತ್ವದಲ್ಲಿ ನಡೆದ ಶಿಬಿರಗಳು, ಜಾತಾ, ತರಗತಿಗಳು ಇಡಿ ದೇಶವನ್ನು ಆವರಿಸಿ ಸಾಕ್ಷರತೆಯ ಪ್ರಜ್ಞೆಯನ್ನು ಸಾರ್ವತ್ರಿಕಗೊಳಿಸಿತೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಸಂದರ್ಭದಲ್ಲಿ ಚಳುವಳಿ ಘೋಷಿಸಿಕೊಂಡ 'ಸಂಪೂರ್ಣ ಸಾಕ್ಷರತಾ' ಗುರಿಯು ಮುಟ್ಟದೆ ಅದು ಕೇವಲ ಪುಸ್ತಕದ ಅಂಕಿ, ಸಂಖ್ಯೆಯಲ್ಲೇ ಉಳಿದು ಹೋದದ್ದು ಅದರಲ್ಲಿ ಭಾಗಿಯಾದ ನಮ್ಮಂತಹವರಿಗೆ ಒಂದು ಅಸಮಾಧಾನದ ಛಾಯೆಯಾದರೂ ಅದರ ಕಾರಣಗಳನ್ನು ಅನ್ವೇಷಿಸಬೇಕಾದ್ದು ಇಂದು ಒಂದು ಅಗತ್ಯವಾಗಿದೆ. ಅದೇನೇ ಇರಲಿ, 'ಸಾಕ್ಷರತೆ'ಯೆಂದೊಡನೆ ಮನಸ್ಸಿನಲ್ಲಿ ಮೂಡುವ ಈ ಭಾವನೆಗಳೊಂದಿಗೆ ಬೆಂಗಳೂರಿನ ನೆರೆಯ ಗ್ರಾಮದಲ್ಲಿ ನಡೆದ ಸಾಕ್ಷರತಾ ಕಾರ್ಯಕ್ರಮವನ್ನು ವೀಕ್ಷಿಸಲು ಹೋದಾಗ ಉಂಟಾದ್ದು ಆಶ್ಚರ್ಯ, ಸಂತೋಷ. ಆದಕ್ಕಾಗಿ ಈ ಲೇಖನ.

ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ನೇತೃತ್ವದಲ್ಲಿ ಆರುತಿಂಗಳಿಂದ ಮಾಗಡಿಯಲ್ಲಿ ವಿಶೇಷ ಸಾಕ್ಷರತಾ ಕಾರ್ಯಕ್ರಮವೊಂದು ನಡೆಯುತ್ತಿದೆಯೆಂಬ ಸುದ್ದಿ ತಿಳಿದಿದ್ದೆವು. ಆ ಕಾರ್ಯಕ್ರಮವನ್ನು ವೀಕ್ಷಿಸಲೆಂದು ನವೆಂಬರ್ 18ರಂದು ಅಚಲದ ಬಳಗವೆಲ್ಲಾ ಒಟ್ಟಾರೆಯಾಗಿ ಆ ಕಾರ್ಯಕ್ರಮದ ಮೇಲುಸ್ತುವಾರಿ ವಹಿಸಿದ್ದ ಶ್ರೀಮತಿ ಲಕ್ಷ್ಮೀರಾಮಮೂರ್ತಿ ಯವರೊಂದಿಗೆ ಮಾಗಡಿಗೆ ತೆರಳಿದೆವು. ನಾವು ಮಾಗಡಿಗೆ ಹೋದ ದಿನ ಸಾಕ್ಷರತಾ ಕಾರ್ಯಕ್ರಮದ ಎರಡನೆಯ ತಂಡದ ಕೊನೆಯ ದಿನವಾಗಿತ್ತು. ವಿದ್ಯಾರ್ಥಿನಿಯರಿಗೆಲ್ಲಾ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಆ ಸ್ಪರ್ಧೆಯಿದ್ದ ಜಾಗವೇ ಅವರು ನಿತ್ಯ ಪಾಠ ಕಲಿಯುವ ಸ್ಥಳವೂ ಆಗಿತ್ತು. ಅದೊಂದು ವಿಶಾಲವಾದ ಕೊಠಡಿ. ಕೊಠಡಿ ತುಂಬಾ ವಿವಿಧ ರೀತಿಯ ರಂಗೋಲಿಗಳು, ವಿವಿಧ ವರ್ಣಗಳಲ್ಲಿ ಬಿಚ್ಚಿಕೊಂಡಿದ್ದವು. ನಾರಾಯಣನ ಕಣ್ಣು, ಬಿಲ್ವಪತ್ರೆ, ಪಾರಿಜಾತ, ದೀಪಾಂಜಲಿ - ಹೀಗೆ ಹಲವು ರೀತಿಯ ನಮಗೆ ಪರಿಚಯವಿರುವ ಹಲವಾರು ರಂಗೋಲಿಗಳು ಅಲ್ಲಿ ನಮ್ಮನ್ನು ಸ್ವಾಗತಿಸಿದವು. ಆದರೆ ಅಲ್ಲಿದ್ದ ವಿಶೇಷವೆಂದರೆ ಎಲ್ಲ ರಂಗೋಲಿಯ ಒಡಲೊಳಗೆ ಕನ್ನಡ ವರ್ಣಮಾಲೆ, ಅಕ್ಷರಮಾಲೆಯು ಸಮವಾಗಿ ಹೆಣೆದು ಕೊಂಡಿತ್ತು. ಈ ಅಕ್ಷರ ರಂಗೋಲಿಯ ಕಾರ್ಯಕ್ರಮ ಅದ್ಭುತವಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಹಸೆ, ರಂಗೋಲಿ ಬರೆಯಬಲ್ಲೆನೆಂದು ತೋರಿಸುವಷ್ಟೇ ಆಸ್ಥೆಯಿಂದ ತಮ್ಮ ಅಕ್ಷರ ಜ್ಞಾನವನ್ನು ಪ್ರದರ್ಶಿಸಲು ಮುಂದಾಗಿದ್ದರು. ಕತ್ತೆತ್ತಿ ನೋಡಿದರೆ ಕೊಠಡಿಯ ತುಂಬಾ ಅಕ್ಷರ ತೋರಣಗಳು. ಅಲ್ಲೂ ವಿದ್ಯಾರ್ಥಿನಿಯರು ತಮ್ಮ ಅಕ್ಷರಜ್ಞಾನವನ್ನು ಮೆರೆಯುವ ಅವಕಾಶ ಮಾಡಿಕೊಂಡಿದ್ದರು. ಅಕ್ಷರಗಳು, ಮಗ್ಗಿ, ಲೆಕ್ಕ ಎಲ್ಲವೂ ಈ ಅಕ್ಷರ ರಂಗೋಲಿ ಮತ್ತು ತೋರಣಗಳ ಒಡಲೊಳಗೆ ನಗುತ್ತಾ ಅರಳಿದ್ದವು.

ಈ ಕಾರ್ಯಕ್ರಮದ ಸಂಯೋಜಕಿ ಕುಮಾರಿ ಮಂಜುಳ ಅತ್ಯಂತ ಚುರುಕಿನ ಹುಡುಗಿ. ಕಾರ್ಯಕ್ರಮ ವೀಕ್ಷಿಸಲು ಹೋದ ನಮಗೆ ಪಟಪಟನೆ ಕಾರ್ಯಕ್ರಮದ ವಿವರಗಳನ್ನು ವಿವರಿಸತೊಡಗಿದರು. ಮೂರು ತಿಂಗಳು ನಡೆಯುವ ಈ ಕೋರ್ಸ್‌ನಲ್ಲಿ ವಾರದ ಆರುದಿನವೂ ಪೂರ್ತಿಪಾಠ, ಭಾನುವಾರ ಮಾತ್ರ ರಜೆ. ಬೆಳಗೆ ಒಂಭತ್ತುವರೆ ಗಂಟೆಗೆ ತಮ್ಮ ಮನೆಗೆಲಸ, ಮಕ್ಕಳ ವ್ಯವಸ್ಥೆಯೆಲ್ಲವನ್ನು ಮಾಡಿ ಸ್ಲೇಟು, ಬಳಪ, ಪುಸ್ತಕ ಹೊತ್ತು ಈ ಶಾಲೆಗೆ ಬರುವ ಹೆಂಗಸರಿಗೆ ತರಗತಿಗಳೆಂದರೆ ಬಹಳ ಅಚ್ಚುಮೆಚ್ಚು. ಐವರು ಶಿಕ್ಷಕಿಯರು ತರಗತಿಯಲ್ಲಿದ್ದವರನ್ನು ಐದು ಪಂಗಡಗಳಾಗಿ ವಿಂಗಡಿಸಿ ಅವರ ಕಲಿಕೆಯ ಸಾಮರ್ಥ್ಯ ಮತ್ತು ಆಸಕ್ತಿಗನುಗುಣವಾಗಿ ಪಾಠ ಹೇಳಿಕೊಡಲು ಆರಂಭಿಸುತ್ತಾರೆ. ಬೆಳಗ್ಗೆ ಕನ್ನಡ ವರ್ಣಮಾಲೆ, ಕಾಗುಣಿತ ಭಾಷಾಜ್ಞಾನ ಹೇಳಿಕೊಟ್ಟರೆ ಮಧ್ಯಾಹ್ನ ಗಣಿತ, ಲೆಕ್ಕವನ್ನು ಬೋಧಿಸಲಾಗುತ್ತದೆ. ಹಿಂದಿನ ದಿನ ಕಲಿತದ್ದನ್ನು ಬಂದೊಡನೆ ಪುನರಾವರ್ತನೆ ಮಾಡಲಾಗುತ್ತದೆ. ನಂತರ ಕಲಿಕೆ. ದಿನದ ಕೊನೆಯಲ್ಲಿ ಅಂದು ಕಲಿತದ್ದನ್ನು ಮತ್ತೊಮ್ಮೆ ಪುನರಾವರ್ತನೆ. ಇಲ್ಲಿ ಕಲಿಯುವ ಹೆಂಗಸರಿಗೆ ವಯಸ್ಸು 18ರಿಂದ 60ರವರೆಗೂ ಇರುವುದರಿಂದ ಕಲಿಸುವ ಶಿಕ್ಷಕಿಯರಿಗೆ ಇದೊಂದು ನಿಜವಾದ ಸವಾಲೇ. ಭಾಷಾಜ್ಞಾನ ಮತ್ತು ಗಣಿತದ ಮಧ್ಯೆಯೇ ಹಾಡು, ಕಥೆಗಳು, ಮಾನಸಿಕ ಧೈರ್ಯ ತುಂಬುವ ಹಿತ ನುಡಿಗಳು ಎಲ್ಲವೂ ಸಾಗುತ್ತವೆ. ಮೂರು ತಿಂಗಳ ಈ ಕಲಿಕೆಯ ಕೊನೆಯಲ್ಲಿ ಒಂದು ಪರೀಕ್ಷೆಯನ್ನು ನಡೆಸಲಾಗುತ್ತದೆ. 600 ಅಂಕಗಳ ಈ ಪರೀಕ್ಷೆಯಲ್ಲಿ ಎಲ್ಲರೂ 500ಕ್ಕಿಂತ ಹೆಚ್ಚು ಪಡೆದವರೇ. ಲಿಖಿತ ಪರೀಕ್ಷೆಯ ಜೊತೆಗೆ ಮೌಖಿಕ ಪರೀಕ್ಷೆಯು ಇರುತ್ತದೆ. ಈ ಮೌಖಿಕ ಪರೀಕ್ಷೆಯಲ್ಲಿ ಕಾಗುಣಿತ, ತಲೆಕಟ್ಟು, ಮಗ್ಗಿ ಮುಂತಾದವುಗಳ ಜ್ಞಾನವನ್ನು ಪರೀಕ್ಷಿಸಲಾಗುತ್ತದೆ.

ಆ ಕೊಠಡಿಯಲ್ಲಿದ್ದ ಮಹಿಳೆಯರ ಉತ್ಸಾಹ, ಕಲಿಯುವುದರ ಬಗ್ಗೆ ಇದ್ದ ಸಂಭ್ರಮ ನೋಡಿ ಸಂತೋಷವಾಯಿತು. ಆದರೂ ಹೊಲದಲ್ಲೋ ಮನೆಯಲ್ಲೋ ಎಲ್ಲೋ ಕೆಲಸ ಮಾಡಿಕೊಂಡಿರಬಹುದಾಗಿದ್ದ ಈ ಹೆಂಗಸರು ಪುಟ್ಟ ಮಕ್ಕಳಂತೆ ಬಾಲ್ಯದ ದಿನಗಳ ಆನಂದಕ್ಕೆ ಹಿಂತಿರುಗಿದ್ದರಲ್ಲ, ಅದೆಂತಹ ಮಹಿಮೆ ಎಂದು ನಮಗೆ ಒಂದು ಕ್ಷಣ ಅರ್ಥವಾಗಲಿಲ್ಲ. ನಂತರ

ಅಲ್ಲಿಂದ ಮಹಿಳೆಯರನ್ನು ಒಬ್ಬೊಬ್ಬರಾಗಿ ಮಾತನಾಡಿಸಿದಾಗ ಅವರ ಅನುಭವಗಳು ಬಿಚ್ಚಿಕೊಳ್ಳತೊಡಗಿದವು.

ವಿದ್ಯಾ ನಗರದ ಗೀತಾ ವೆಂಕಟೇಶ್ ತಾಯಿಯ ಮನೆಯಲ್ಲಿದ್ದಾಗ ಓದಿನಲ್ಲಿ ಆಸಕ್ತಿ ತೋರಿಸಲಿಲ್ಲ. ಅಪ್ಪ ಇಟ್ಟಿದ್ದ ಅಂಗಡಿಯಲ್ಲಿ ಕೂತು ವ್ಯಾಪಾರ ಮಾಡುವುದು ಶಾಲೆಗೆ ಹೋಗುವುದಕ್ಕಿಂತ ಹೆಚ್ಚು ಇಷ್ಟವಾಗಿತ್ತು. ಅವರಂತೆ ತಂಗಿ, ತಮ್ಮಂದಿರು ಆಸಕ್ತಿ ತೋರಲಿಲ್ಲ. ಆದರೆ ಅಕ್ಕ ಮಾತ್ರ ಶಾಲೆಗೆ ಹೋಗಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದರು ಮದುವೆಯಾಗುವವರೆಗೂ ಓದಿನ ಅಗತ್ಯ ಕಂಡು ಬರಲೇ ಇಲ್ಲ. ಮದುವೆ ನಿಷ್ಕರ್ಷವಾದ ಮೇಲೆ ಗಂಡನಿಂದ ಪತ್ರ ಬಂತು. ಅದನ್ನು ಓದುವುದು ಹೇಗೆ? ಆಗ ಅಕ್ಷರ ಕಲಿಯದ್ದಕ್ಕೆ ತಂದೆ, ತಾಯಿಗಳಿಂದ ಬೈಸಿಕೊಂಡದ್ದಾಯಿತು. ಕೊನೆಗೆ ಅಕ್ಕ ಸೌಭಾಗ್ಯಳನ್ನು ಕಾಗದ ಓದಲು ಅಂಗಲಾಚಿ ಬೇಡಿಕೊಳ್ಳಬೇಕಾಯ್ತು. ಹೆಂಡತಿ ಇಷ್ಟೊಂದು ಅನಕ್ಷರಸ್ಥೆಎಂದು ತಿಳಿಯದ, ಬಿ.ಎ. ಮಾಡಿದ್ದ ಪತಿರಾಯ ಏನೂ ಮುನಿಸಿಕೊಳ್ಳದಿದ್ದರೂ ಮದುವೆಯಾದ ನಂತರ ಅಕ್ಷರ ಕಲಿಯಲು ಒತ್ತಾಯಿಸುತ್ತಿದ್ದರು. ಮದುವೆ, ನಂತರ ಮಕ್ಕಳು ಕಲಿಕೆಗೆ ಆದ್ಯತೆಯೆಲ್ಲಿ? ಆ ವೇಳೆಗೆ ಮನಸ್ಸಿಗೆ ಬೇಸರವಾಗುವ ಘಟನೆಯೊಂದು ನಡೆಯಿತು. ಆ ಊರಿನ ಬ್ಯಾಂಕ್‌ನಲ್ಲಿ ಗಂಡನ ನೆರವಿನಿಂದ ತೆರೆದಿದ್ದ ಸೇವಿಂಗ್ಸ್ ಬ್ಯಾಂಕ್ ಅಕೌಂಟಿನಲ್ಲಿ ಹಣ ತರಲು ಹೋದರು. ಎಂದಿನಂತೆ ಚೆಕ್ ತುಂಬಿಸಲು ಅಲ್ಲಿನ ಸಿಬ್ಬಂದಿಗಳ ಸಹಾಯ ಕೋರಿದರು. ಬಹುಷಃ ಕೆಲಸದ ಒತ್ತಡದಲ್ಲಿದ್ದ ಅವರು 'ಅದನ್ನೆಲ್ಲ ತುಂಬಿಸಲು ನಮಗೆ ಸಮಯವಿಲ್ಲ. ನೀವೇ ತುಂಬಿಕೊಂಡು ಬನ್ನಿ' ಎಂದುತ್ತರಿಸಿದರು. ಹಿಂದೆ ಎಂದೂ ಹಾಗೇ ಆಗಿರಲಿಲ್ಲ. ನಾಚಿಕೆ ಮತ್ತು ಅವಮಾನದಿಂದ ತಮ್ಮ ಮೇಲೆ ಅವರಿಗೆ ಸಿಟ್ಟು ಬಂತು. ಮನೆಗೆ ಬಂದೊಡನೆ ಎಲ್ಲವನ್ನೂ ಮನೆಯಲ್ಲಿ ಹೇಳಿಕೊಂಡರು. ಆಗಷ್ಟೇ ಸಾಕ್ಷರತಾ ಕಾರ್ಯಕ್ರಮದ ಯೋಜನೆ ಮಾಗಡಿಗೆ ಬಂದಿತ್ತು. ತನಗೆ 29ವರ್ಷ ವಯಸ್ಸು, ತನಗಿಂತ ಚಿಕ್ಕ ವಯಸ್ಸಿನ ಟೀಚರ್‌ಗಳು ಪಾಠ ಕಲಿಯುವುದು ಹೇಗೋ ಏನೋ - ಎಂದು ಅನುಮಾನಿಸುತ್ತಿದ್ದಾಗ ಪಾಠ ಕಲಿಯಲು ಮನೆಯವರಿಂದ ಒತ್ತಾಯ. ಕೂಡಲೆ ಹೋಗಿ ಶಾಲೆ ಸೇರಿದರು. ಕಲಿತರು. ಮೂರುತಿಂಗಳ ನಂತರ ಅದೇ ಬ್ಯಾಂಕಿಗೆ ಹೋಗಿ ಅಲ್ಲಿ ಚೆಕ್ ತುಂಬಿ ಹಣ ಕೇಳಿದಾಗ ಬ್ಯಾಂಕಿನ ಮ್ಯಾನೇಜರ್ ಸುಸ್ತು! ಸಂತೋಷಪಟ್ಟು ಗೀತಾರವರನ್ನು ಅಭಿನಂದಿಸಿ ಕಳುಹಿಸಿದರು.

ಮಾಗಡಿಯ ಶಾಹಿನಾ ಹದಿನಾರು ಹದಿನೆಂಟರ ಹುಡುಗಿ. ಐದು ಜನ ಒಡಹುಟ್ಟಿದರವರೊಡನೆ ಇದಳು ಶಾಲೆಗೆ ಹೋಗಲಿಲ್ಲ. ಯಾರೂ ಶಾಲೆಗೆ ಹೋಗಲಿಲ್ಲ. ಶಾಹಿನಾ ಹೂಮಾರುವ ಕೆಲಸ ಮಾಡುತ್ತಾಳೆ. ಲೆಕ್ಕ ಮಾಡಲೇ ಗೊತ್ತಿಲ್ಲದ ಶಾಹಿನಾಗೆ ಆಗಾಗ್ಗೆ ಅನ್ಯಾಯವಾಗುತ್ತಿದ್ದುದೂ ಉಂಟು. ಸಾಕ್ಷರತಾ ಶಾಲೆಗೆ ಬಂದ ಮೇಲೆ ಲೆಕ್ಕ ಮಾಡಬಲ್ಲಳು. ಅಕ್ಷರ ಓದಬಲ್ಲಳು - ''ಟಿ.ವೀಲಿ ಬರುವ ಹೆಸರುಗಳನ್ನು ಓದುತ್ತೀನಿ. ಪೇಪರ್ ಓದಿ ಹೇಳ್ತೀನಿ. ಈಗ ನಮ್ಮ ಮನೆಯವರ ಹೆಸರೆಲ್ಲಾ ಬರೆಯಕ್ಕೆ ಬರುತ್ತೆ 'ಅಂತ ನನಗೆ ತುಂಬಾ ಖುಷಿ' ಎನ್ನುತ್ತಾಳೆ ಶಾಹಿನಾ.

ಮತ್ತೊಬ್ಬ ವಿದ್ಯಾರ್ಥಿನಿ ಗಂಗಮ್ಮ ವಿದ್ಯಾನಗರದಿಂದ ಬಂದವರು ತಾಯಿಯ ಮನೆಯಲ್ಲಿ ಬಡತನ. ಶಾಲೆಗೆ ಕಳುಹಿಸಿಲ್ಲ. ಈಗ ಮದುವೆಯಾದ ನಂತರ ಗಂಡನೇ ಪ್ರೋತ್ಸಾಹ ನೀಡಿ, ಬಲವಂತ ಮಾಡಿ ಶಾಲೆಗೆ ಕಳುಹಿಸಿದ್ದು Wiring ಕೆಲಸ ಮಾಡುವ ಗಂಗಮ್ಮನ ಗಂಡನೂ ಓದಿಲ್ಲ, ಆದರು ಓದಲಿಕ್ಕೆ ಹೋಗು ಎಂದು ಬಲವಂತ ಮಾಡಿದ್ದು ಮೆಚ್ಚಬೇಕಾದ್ದೆ. ''ನನಗೆ ಬಳಪ ಹಿಡಿಯಕ್ಕೂ ಬರುತ್ತಿರಲಿಲ್ಲ. ತುಂಬಾ ನಾಚಿಕೆ. ಆದರೆ ಇಲ್ಲಿ ಬಂದ ಮೇಲೆ ಎಲ್ಲವನ್ನೂ ಕಲಿಸಿದರು. ಈ ಮೇಡಂಗಳನ್ನು ನಾವು ಈ ಜನ್ಮದಲ್ಲಿ ಮರೆಯಲ್ಲ. ತುಂಬಾ ಸಹನೆಯಿಂದ ನಮ್ಮಂತಹ ಮೊದ್ದುಗಳಿಗೆ ಅಕ್ಷರ ಹೇಳಿಕೊಟ್ಟರಲ್ಲ.''

ಮನೆಯವರ ಪ್ರೋತ್ಸಾಹದಿಂದ ಶಾಲೆಗೆ ಬಂದವರದೊಂದು ಕತೆಯಾದರೆ ಮನೆಯವರ ಸಮ್ಮತಿಗೂ ಕಾಯದೆ, ಅವರ ಇಷ್ಟಕ್ಕೆ ವಿರುದ್ಧವಾಗಿ ಶಾಲೆಗೆ ಹೋಗಬೇಕೆಂದು ಬಂದವರು ಹಲವರಿದ್ದರು.

ಚಪ್ಪಲಿ ಹೊಲೆಯುವ ಕಾಯಕದ ಗಂಡ. ಹೆಂಡತಿ ಮನೆಕೆಲಸ ಮಾಡುವ ಹಳೇ ರಂಗಮ್ಮ. ದೊಡ್ಡ ದೊಡ್ಡ ಮಕ್ಕಳು. ಅವರೂ ಕೆಲಸಕ್ಕೆ ಹೋಗುವಂತಹವರೇ. ಅಪ್ಪ, ಮಕ್ಕಳಿಬ್ಬರಿಗೂ ಇಳಿವಯಸ್ಸಿನ ಅಮ್ಮ ಶಾಲೆಗೆ ಹೋಗುವುದಿಷ್ಟವಿಲ್ಲ. ಕುಡಿದ ಗಂಡನಂತೂ ದಿನಾ ಬಂದು ಹಳೇ ರಂಗಮ್ಮನನ್ನು ಬಡಿಯುವುದು. ಶಾಲೆಗೆ ಹೋಗಲು ಆರಂಭಿಸಿದ ಮೇಲೆ ಬಡಿತ ಇನ್ನೊಂದೆರಡು ಜಾಸ್ತಿಯೇ ಬೀಳುತ್ತದೆ. ''ನೀನು ನನ್ನನ್ನು ಹೊಡಿ, ಬಡಿ, ಚಚ್ಚು, ನಾನು ಮಾತ್ರ ಶಾಲೆಗೆ ಹೋಗಿಯೇ ತೀರುತ್ತೇನೆ'' ಎನ್ನುವ ರಂಗಮ್ಮ ಶಾಲೆಗೆ ಬಂದ ಮೇಲೆ ಮನೆಯ ದುಃಖವನ್ನೆಲ್ಲಾ ಮರೆಯುತ್ತೇನೆ ಎನ್ನುತ್ತಾರೆ.

ಟೈಲರಿಂಗ್ ಕೆಲಸ ಮಾಡುವ ನಾಗರತ್ನಮ್ಮ ತಿರುಮಲೆಯಿಂದ ಬರುತ್ತಾರೆ. ಮುಂಚೆ ಅಕ್ಷರ ಕಲಿಯದ ಅವರಿಗೆ ಈಗ ಅಕ್ಷರ ಕಲಿಯುವ ಅವಕಾಶ ತಪ್ಪಿಸಿಕೊಳ್ಳುವ ಮನಸ್ಸಿಲ್ಲ. ಮನೆಯವರೆಲ್ಲಾ ಅತ್ತೆಯೂ ಸೇರಿ ತುಂಬಾ ತೊಂದರೆ ಕೊಟ್ಟದ್ದೆ. ಆದರೆ ಶಾಲೆಯಲ್ಲಿ 'ನಾನು ಟೈಲರಿಂಗ್ ಹೇಳಿ ಕೊಡ್ತೀನಿ' ಅಂತ ಸುಳ್ಳು ಹೇಳಿ ಬಂದು ಇಲ್ಲಿ ಅಕ್ಷರ ಕಲಿಯುತ್ತಿದ್ದೇನೆ ಎನ್ನುತ್ತಾರೆ.

''ನಾವು ನಮ್ಮ ಮೇಡಂಗಳಿಗೆ ಎಷ್ಟು ಬೇಜಾರು ಮಾಡಿದ್ದೇವೋ. ಆದರೂ ಅವರಂತೂ ನಮಗೆ ತುಂಬ ಸಹನೆಯಿಂದ ಅಕ್ಷರ ಹೇಳಿಕೊಟ್ಟರು'' ಎಂದು ಪ್ರತಿಯೊಬ್ಬ ಹೆಂಗಸರೂ ಹೇಳುತ್ತಾರೆ. ಪ್ರತಿಯೊಬ್ಬ ಶಿಕ್ಷಕಿಯರನ್ನೂ ಹಾಡಿ ಹೊಗಳುವ ಇವರು 'ಶಿಕ್ಷಣ' ಎನ್ನುವ ಪದಕ್ಕೆ ಗೌರವ ತುಂಬುತ್ತಿದ್ದಾರೆ, ಎಂದೆನಿಸುತ್ತದೆ.

ಇಲ್ಲಿ ಬರುವ ಹೆಂಗಸರಿಗೆಲ್ಲಾ ಮನೆಯಲ್ಲಿ ಸಮಸ್ಯೆಗಳಿವೆ, ಎಲ್ಲರೂ ಮನೆಯವರ ಪ್ರೋತ್ಸಾಹದಿಂದಲೇ ಬಂದವರಲ್ಲ.

ಕುಡಿತದ ಗಂಡನಿಂದ ಅತ್ತೆಯ ಬಯ್ಗಳಿಂದ, ಅಕ್ಕಪಕ್ಕದವರ ಮೂದಲಿಕೆಯಿಂದ ಧೈರ್ಯಗುಂದದೆ ಕಲಿಯಲು ಬರುವ ಇವರುಗಳ ಹುಮ್ಮಸ್ಸನ್ನು ಯಾರಾದರೂ ಮೆಚ್ಚಬೇಕು. ಇಲ್ಲಿ ಗಂಡ ಬಿಟ್ಟ ಹೆಂಗಸರಿದ್ದಾರೆ. ಗಂಡ ಸತ್ತ ಹೆಂಗಸರು ಇದ್ದಾರೆ. ಅಷ್ಟೇ ಅಲ್ಲ, ಹಲವು ಹೆಂಡಿರನ್ನು ಹೊಂದಿ ಗೋಳು ಹುಯ್ಯುವ ಗಂಡಂದಿರಿಂದ ನೋವು ತಿಂದ ಮಹಿಳೆಯರಿದ್ದಾರೆ. ಕೌಟುಂಬಿಕ ದೌರ್ಜನ್ಯದ ಎಲ್ಲ ನೋವಿಗೆ ಬಲಿಯಾದ ಈ ಹೆಂಗಸರು ಇಲ್ಲಿ ಅಕ್ಷರ ಕಲಿಯುವುದರ ಜೊತೆಗೆ ತಮ್ಮ ವೈಯಕ್ತಿಕ ಮತ್ತು ಸಾಮಾಜಿಕ ನೋವುಗಳನ್ನು ಕುರಿತು ಮಾತನಾಡಿಕೊಳ್ಳುತ್ತಾರೆ. ಇಲ್ಲಿ ಶಿಕ್ಷಕಿಯರು ಈ ಸಮಸ್ಯೆಗಳನ್ನು ಹಗುರ ಮಾಡಿಕೊಳ್ಳುವ, ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಪಾಠ ಮಾಡುತ್ತಾರೆ. ಮಾಗಡಿಯ ಸ್ಥಳೀಯ ಪತ್ರಿಕೆ 'ಕರುನಾಡ ಸಂಜೆ'ಯನ್ನು ದಿನ ಮಹಿಳೆಯರಿಗೆಲ್ಲಾ ಓದಿ ಹೇಳಿ ಅಲ್ಲಿ ಪ್ರಸ್ತಾಪಿತವಾಗಿರುವ ಸಾಮಾಜಿಕ ವಿಷಯಗಳನ್ನು ಕುರಿತು ಎಲ್ಲರ ಗಮನ ಸೆಳೆಯುತ್ತಾರೆ. ಈ ಸಾಮಾಜಿಕ ತಿಳಿವಿನ, ಪ್ರಜ್ಞೆಯ ವಿಸ್ತಾರ ಅವರನ್ನು ಕ್ರಿಯಾಶೀಲರಾಗುವಂತೆಯೂ ಮಾಡಿದೆ. ಬಳ್ಳಾರಿಯ ಎರ್ರಮ್ಮನಿಗೆ ಉಂಟಾದ ಬೆತ್ತಲೆ ಮೆರವಣಿಗೆ ಅನ್ಯಾಯಕ್ಕೆ ಪ್ರತಿಭಟಿಸಿ ಮಾಗಡಿಯಲ್ಲಿ ಈ ಮಹಿಳೆಯರೆಲ್ಲಾ ಸೇರಿ ಒಂದು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಈ ಕಾರ್ಯಕ್ರಮವನ್ನು S-4 ಕಾರ್ಯಕ್ರಮವೆಂದು ಇವರು ಕರೆಯುತ್ತಾರೆ. ಸಾಕ್ಷರತೆ, ಸ್ವಾವಲಂಬನೆ, ಸ್ವಸಹಾಯ, ಸ್ವಶಕ್ತಿ - ಎಂದು ಕರೆಯುವ ಈ ಕಾರ್ಯಕ್ರಮದಲ್ಲಿ ಮಹಿಳೆಯರ ಸರ್ವಾಂಗೀಣ ಪ್ರಗತಿಯನ್ನುಂಟು ಮಾಡಬೇಕೆಂಬ ಆಶಯವಿದೆ. ಕಾರ್ಯಕ್ರಮದ ಸಂಯೋಜಕಿ ಎನ್. ಮಂಜುಳಾ ಜೊತೆಗೆ ಉಳಿದ ಶಿಕ್ಷಕಿಯರಾದ ಮಹಾಲಕ್ಷ್ಮಿ, ವಸಂತ, ರತ್ನಮ್ಮ, ನರಸಮ್ಮ - ಮುಂತಾದವರು ಒಟ್ಟಾರೆಯಾಗಿ ಸೇರಿ S-4 ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಶಿಕ್ಷಣದ ಕೋರ್ಸು ಮುಗಿದ ಮೇಲೆ, ಈ ಮಹಿಳೆಯರೇ ಮಾಡಿಕೊಂಡಿರುವ 'ಸ್ಪಂದನ' ಮಹಿಳಾ ಸಂಘದ ಮೂಲಕ ಸ್ವಾವಲಂಬನೆಯ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಟೈಲರಿಂಗ್, ಹಪ್ಪಳ ಮಾಡುವುದು ಮತ್ತು ಪೇಪರ್ ಕವರ್ ಮಾಡುವ ಉದ್ದೇಶ ಹೊಂದಿರುವ ಈ ಸಂಘ ಸಾಕ್ಷರತೆಯ ಕಾರ್ಯಕ್ರಮಕ್ಕೆ ಬಂದ ಎಲ್ಲರನ್ನೂ ಇದರಲ್ಲಿ ತೊಡಗಿಸಿಕೊಳ್ಳುವ ಉದ್ದೇಶ ಹೊಂದಿದೆ. S-4 ಕಾರ್ಯಕ್ರಮದಲ್ಲಿ ಯಶಸ್ವಿಯಾಗಿ ಕೋರ್ಸ್ ಮುಗಿಸಿದ ಎಲ್ಲ ವಿದ್ಯಾರ್ಥಿನಿಯರಿಗೂ ಸಂಸ್ಥೆಯು ಒಂದು ಸಾವಿರ ರೂಗಳನ್ನು ಪ್ರೋತ್ಸಾಹ ಧನವಾಗಿ ಕೊಡುತ್ತದೆ. ಈ ಹಣವನ್ನು ಯಾವುದಾದರೂ ಆರ್ಥಿಕ ಕಾರ್ಯಕ್ರಮದಲ್ಲಿ ತೊಡಗಿಸಿ ಈ ಮಹಿಳೆಯರು ಸ್ವಾವಲಂಬನೆಯನ್ನು ಸಾಧಿಸಲೆಂಬುದು ವ್ಯವಸ್ಥಾಪಕರ ಉದ್ದೇಶ. ಆದ್ದರಿಂದ ಕೋರ್ಸಿನ ಆರಂಭದಲ್ಲೇ 1000ರೂಗಳನ್ನು ಅವರು ಯಾವರೀತಿ ಖರ್ಚು ಮಾಡಬಹುದು, ಎಂಬುದನ್ನು ಕೇಳಿ ಒಂದು ಪತ್ರ ಪಡೆದಿರುತ್ತಾರೆ. ಕೋರ್ಸು ಮುಗಿದ ನಂತರ ಅವರ ಆ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಿದ್ದಾರೆ, ಎಂದು ಮನೆ, ಮನೆಗೆ ಹೋಗಿ ಪರೀಕ್ಷಿಸಲಾಗುತ್ತದೆ.

ಮೂರು ತಿಂಗಳು ಅಕ್ಷರ, ಗಣಿತ ಕಲಿತು ನಂತರ ಮುಂದುವರಿಸದಿದ್ದರೆ ಅದು ಮರೆತು ಹೋಗುವುದಿಲ್ಲವೇ? ಎಂಬುದು ಯಾರಲ್ಲಾದರೂ ಹುಟ್ಟುವ ಪ್ರಶ್ನೆ. ಅದಕ್ಕೆ ಇಲ್ಲಿನ ಶಿಕ್ಷಕಿಯರು ಯೋಜಿಸಿರುವ ಉಪಾಯವೆಂದರೆ, ಕೋರ್ಸು ಮುಗಿದ ನಂತರ ಪ್ರತಿಭಾನುವಾರದಂದು ಶಾಲೆಗೆ ಬಂದು ಹಳೆ ವಿದ್ಯಾರ್ಥಿನಿಯರಿಗೆ ಹೆಚ್ಚು ಓದುವ ಅಭ್ಯಾಸ ಮತ್ತು ಅವರ ಪ್ರಶ್ನೆಗಳನ್ನು ಪರಿಹರಿಸುವುದು - ಮುಂತಾದವನ್ನು ನಡೆಸುತ್ತಾರೆ. ಮೂರು ತಿಂಗಳ ಕೋರ್ಸು ಮುಗಿದ ಕೊನೆಯ ದಿನ ಪ್ರತಿಯೊಬ್ಬ ಹೆಂಗಸರೂ 18 ಚಿಕ್ಕ ಚಿಕ್ಕ ಪುಸ್ತಕಗಳನ್ನು ಉಡುಗೊರೆಯಾಗಿ ಪಡೆಯುತ್ತಾರೆ. ಈ ಪುಸ್ತಕಗಳನ್ನೇ ಅವರು ಪ್ರತಿ ಭಾನುವಾರ ಬಂದು ಶಿಕ್ಷಕರ ನೆರವಿನಿಂದ ಓದುವುದು.

ಈ ಅದ್ಭುತ ಯೋಜನೆಯ ವಿವರಗಳನ್ನು ಶಿಕ್ಷಕಿಯರಿಂದ ಮತ್ತು ಅಲ್ಲಿನ ವಿದ್ಯಾರ್ಥಿನಿಗಳಿಂದ ತಿಳಿದ ನಾವು ಈ ಯೋಜನೆಯ ಪರಿಕಲ್ಪನೆ ನೀಡಿದ ಮತ್ತು ಮುಖ್ಯ ರೂವಾರಿಯಾದ ಸುಮಂಗಲಿ ಸೇವಾಶ್ರಮದ ಎಸ್. ಜಿ. ಸುಶೀಲಮ್ಮನವರ ಬುದ್ಧಿ ಮತ್ತೆ, ಸಾಮಾಜಿಕ ಬದ್ಧತೆಗೆ ತಲೆದೂಗಿದೆವು. ಸಾಕ್ಷರಳಾದ, ಸ್ವಾವಲಂಬಿಯಾದ, ಸ್ವಸಹಾಯ, ಸ್ವಶಕ್ತಿಯಿಂದಲೇ ಮೂರ್ತೀಭವಿಸಿದ ಮಹಿಳೆಯನ್ನು ಸಮಾಜದಲ್ಲಿ ಸೃಷ್ಟಿಸುವ ಈ ಕಾಯಕ ನಿರಂತರ ನಡೆಯಲಿ ಎನ್ನುವುದು ನಮ್ಮೆಲ್ಲರ ಸದಿಚ್ಛೆ.

- ಅಚಲ

ಕಂಬನಿ

ಮಹಿಳಾ ಚಳುವಳಿಯ ನಾಯಕಿಯರಲ್ಲೊಬ್ಬರಾದ ಕಾಂ। ಸುಶೀಲಾ ಗೋಪಾಲನ್ ಡಿಸೆಂಬರ್ 19ರಂದು ತಿರುವಂತನಪುರದಲ್ಲಿ ಕೊನೆಯುಸಿರೆಳೆದರು.

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಹಿರಿಯ ನಾಯಕಿಯಾಗಿದ್ದ ಕಾಂ। ಸುಶೀಲಾಗೋಪಾಲನ್ ಲೋಕಸಭೆಗೆ ಎರಡು ಬಾರಿ ಚುನಾಯಿತರಾಗಿದ್ದು ಸಂಸತ್ತಿನಲ್ಲಿ ಮಹಿಳೆಯರ ಕಾಳಜಿಗಳನ್ನು ಸಮರ್ಥವಾಗಿ ಪ್ರತಿನಿಧಿಸುತ್ತಿದ್ದರು. ವರದಕ್ಷಿಣೆ ವಿರೋಧಿ ಶಾಸನವನ್ನು ರಚಿಸಿ, ಮಂಡಿಸುವಲ್ಲಿ, ಪ್ರಮುಖ ಪಾತ್ರವಹಿಸಿದ್ದರು. ಕೇರಳ ಶಾಸನಸಭೆಗೂ 1996ರಲ್ಲಿ ಚುನಾಯಿತರಾಗಿ ಹಿಂದಿನ ಎಡ ಪ್ರಜಾಸತ್ತಾತ್ಮಕ ಸರ್ಕಾರದಲ್ಲಿ ಕೈಗಾರಿಕಾ ಸಚಿವೆಯಾಗಿದ್ದರು.

ಧೀಮಂತ ನಾಯಕಿಯ ಅಗಲಿಕೆಗೆ ಅಚಲ ಕಂಬನಿ ಮಿಡಿಯುತ್ತದೆ.

ಸರ್ವರಿಗೂ 46ನೇ ಕರ್ನಾಟಕ ರಾಜ್ಯೋತ್ಸವ ಶುಭಾಶಯಗಳು

ಬಾಂಧವ್ಯದ ಬೆಸುಗೆಯಾಗಿ,
ಸಂಸ್ಕೃತಿಯ ಸೊಗಡಾಗಿ,
ಕಸ್ತೂರಿಯ ಕಂಪಾಗಿ,
ಸಂಪತ್ತಿಗೆ ಸೆಲೆಯಾಗಿ,
ಮಾನವ ಕುಲಕೋಟಿಗೆ ಮಂಗಳ ಹರಸುವ,
ವೀಣಾಪಾಣಿಯ ವಾಣಿ - ಕನ್ನಡ ನುಡಿ ರಾಣಿ.

"ನಮ್ಮ ಚೆಲುವ ಕನ್ನಡನಾಡು ಉದಯಿಸಿ ಇಂದಿಗೆ 45 ವರ್ಷಗಳು ಸಂದಿವೆ. ಕನ್ನಡಾಂಬೆಯ ಕೀರ್ತಿ ನಾಲ್ಕೂ ದಿಸೆಗಳಲ್ಲಿ ಪ್ರಸರಿಸುತ್ತಿರುವುದು ಹೆಮ್ಮೆಯ ವಿಷಯ. ಕರ್ನಾಟಕ ರಾಜ್ಯೋತ್ಸವದ ಈ ಶುಭದಿನದಂದು ಕರ್ನಾಟಕದ ಕುಲಕೋಟಿಗೆ ನನ್ನ ಹಾರ್ದಿಕ ಶುಭಾಶಯಗಳು."

- ಎಸ್. ಎಂ. ಕೃಷ್ಣ
ಮುಖ್ಯ ಮಂತ್ರಿಗಳು

ಕರ್ನಾಟಕದಲ್ಲಿ ಕನ್ನಡಕ್ಕೆ ಭದ್ರ ನೆಲೆಗಟ್ಟು
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಲಹೆಗಳಿಗೆ ಆದ್ಯತೆ

- 1ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ವೃತ್ತಿಶಿಕ್ಷಣದಲ್ಲಿ ಮೀಸಲಾತಿ ಇಡೀ ದೇಶಕ್ಕೆ ಮಾದರಿಯಾದ ಭಾಷಾ ನೀತಿ.
- ಉದ್ಯೋಗದಲ್ಲಿ ಕನ್ನಡ ಮಾಧ್ಯಮದವರಿಗೆ ಮೀಸಲಾಗಿ. ಕನ್ನಡ ಅಭಿಮಾನಕ್ಕೆ ಹೊಸ ಆಯಾಮ.
- ಕನ್ನಡೇತರ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಕನ್ನಡ ಕಡ್ಡಾಯ, ಪೂರ್ಣಾವಧಿ ಕನ್ನಡ ಅಧ್ಯಾಪಕರ ನೇಮಕ.
- ಆಡಳಿತದಲ್ಲಿ ಕನ್ನಡದ ಅನುಷ್ಠಾನ ಮಾಡದೆ ಇರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ.
- ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪ್ರತ್ಯೇಕ ಕನ್ನಡ ಅನುಷ್ಠಾನ ವಿಭಾಗ ಆರಂಭಕ್ಕೆ ಐತಿಹಾಸಿಕ ಆದೇಶ.
- ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾದ್ಯಮ ಆರಂಭಕ್ಕೆ ತೀರ್ಮಾನ.
- ಕಂಪ್ಯೂಟರ್‌ನಲ್ಲಿ ಕನ್ನಡದ ಅಳವಡಿಕೆಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರತ್ಯೇಕ ಅನುದಾನ.
- ಪದವಿಪೂರ್ವ ಶಿಕ್ಷಣದಲ್ಲಿ ಐಚ್ಛಿಕ ಕನ್ನಡಕ್ಕೆ ಮುಕ್ತಾನುಮತಿ.
- ಬಿ. ಇಡಿ ಪ್ರವೇಶ ಪರೀಕ್ಷೆಯಲ್ಲಿ ಕನ್ನಡಕ್ಕೆ ಸಮಾನ ಸ್ಥಾನ.
- ವೃತ್ತಿ ಶಿಕ್ಷಣದಲ್ಲಿ ಅಗತ್ಯಕ್ಕನುಗುಣವಾಗಿ ಕನ್ನಡ ಪಠ್ಯ ಅಳವಡಿಸಲು ನಿರ್ಧಾರ.
- ಗಡಿನಾಡು ಕನ್ನಡಿಗರ ಸಮಸ್ಯೆಗಳ ಅಧ್ಯಯನ ಹಾಗೂ ಪರಿಹಾರಕ್ಕೆ ಆದ್ಯತೆ.
- ಪ್ರಾಥಮಿಕ ಶಿಕ್ಷಣ ಪೂರ್ಣವಾಗಿ ಕನ್ನಡ : ಮಾತೃಭಾಷಾ ಮಾಧ್ಯಮದಲ್ಲಿರಬೇಕೆಂಬ ತತ್ವಕ್ಕೆ ಬದ್ಧತೆ ಮತ್ತು ಅನುಷ್ಠಾನಕ್ಕೆ ಸಿದ್ಧತೆ.
- ಕನ್ನಡ ಕಂಪ್ಯೂಟರ್ ಕೇಂದ್ರ ಸ್ಥಾಪನೆ.
- ಕನ್ನಡ ಮಾಧ್ಯಮ ಪ್ರಶಸ್ತಿ ಸ್ಥಾಪನೆ.

ರಾಜ್ಯಭಾಷೆಯ ಅಭಿವೃದ್ಧಿ ಕೆಲಸಗಳಲ್ಲಿ ದೇಶದಲ್ಲೇ ಕರ್ನಾಟಕಕ್ಕೆ ಮೊದಲ ಸ್ಥಾನ, ದೂರಗಾಮಿ ಕನ್ನಡ ಕೆಲಸಕ್ಕೆ ಆದ್ಯತೆ ಎಂದೆಂದು

- ಕರ್ನಾಟಕ ವಾರ್ತೆ

ಬುರ್ಕಾ ಮತ್ತು ಅಧಿಕಾರ

- ಕಲ್ಪನಾ ಶರ್ಮ

ತಾಲಿಬಾನರ ಕಪಿ ಮುಷ್ಟಿಯಿಂದ ವಿಮೋಚನೆಗೊಂಡ ಕಾಬೂಲ್‌ನ ಚಿತ್ರ ಜಗತ್ತಿಗೆ ಪ್ರಕಟಗೊಂಡದ್ದು ಅಲ್ಲಿನ ಮಹಿಳೆಯೊಬ್ಬಳು ಬುರ್ಕಾ ತೆರೆದು ಕ್ಯಾಮರಾ ಕಣ್ಣೆದುರು ನಿಂತಾಗ. ಆ ಕ್ಷಣಕ್ಕೆ ಇದು ಎಷ್ಟೇ ರೋಮಾಂಚಕಾರಿ ಸಂಗತಿಯಾಗಿ ಕಂಡರೂ, ಆಫ್ಘಾನ್ ಮಹಿಳೆಗೂ ವಿಮೋಚನೆಗೂ ನಡುವೆ ಇದ್ದದ್ದು ಒಂದು ತುಂಡು ಬಟ್ಟೆ ಮಾತ್ರವೇ? ಎಂಬ ಸಂಶಯ ಮೂಡುತ್ತದೆ.

ಮಹಿಳಾ ಸಶಕ್ತೀಕರಣದಂತಹ ಗಂಭೀರ ವಿಷಯಗಳನ್ನು ಒಂದು ಸಣ್ಣ ಸಂಕೇತಕ್ಕೆ ಇಳಿಸಿಬಿಡುವುದು ಅತಿಸಾಮಾನ್ಯ ವಿಷಯವೆನಿಸಿ ಬಿಡುತ್ತದೆ. ಆದರೆ ಮಾಧ್ಯಮಗಳು, ಶಾಸನಕಾರರು ಮುಂತಾದವರು ಮಹಿಳೆಯರ ಗಂಭೀರ ಸಮಸ್ಯೆಗಳನ್ನು ಇಂತಹ ಸಂದರ್ಭಗಳಲ್ಲಿ ಪಕ್ಕಕ್ಕೆ ಸರಿಸಿಬಿಡುವುದು ಸುಲಭವಾಗುತ್ತದೆ. ಮುಸ್ಲಿಂ ರಾಷ್ಟ್ರಗಳಿಗೆ ಸಂಬಂಧಪಟ್ಟಂತೆ ಮಾತನಾಡುವಾಗ 'ಉದಾರವಾದಿ' ಮತ್ತು 'ಸಂಪ್ರದಾಯವಾದಿ' ಎಂಬ ಶಬ್ದಗಳಿಗೆ ಪರ್ಯಾಯವಾಗಿ 'ಪಾಶ್ಚಿಮಾತ್ಯ' ಮತ್ತು 'ಮುಸ್ಲಿಂ' ರಾಷ್ಟ್ರಗಳೆಂದು ಕರೆಯುವ ರೂಢಿ ಬಂದು ಬಿಟ್ಟಿದೆ. ಆದ್ದರಿಂದಲೇ ಮಹಿಳಾ ಹಕ್ಕುಗಳನ್ನು ಉಲ್ಲಂಘಿಸದೆ ಧರ್ಮದ ನಿಜವಾದ ಅಂತಸ್ಸತ್ವದಿಂದ ಕೂಡಿದ ಆಯ್ಕೆಗಳನ್ನು ಕಾಣವುದೇ ಅಪರೂಪವಾಗಿದೆ.

ಮುಸುಕು ಹಾಕಿಕೊಂಡ ಮಹಿಳೆ ಸಶಕ್ತಳಾಗಿರುವುದಕ್ಕೆ ಸಾಧ್ಯವೇ ಇಲ್ಲ, ಎಂಬ ತೀರ್ಮಾನಕ್ಕೆ ನಾವು ಬರುತ್ತೇವೆ. ಆದ್ದರಿಂದ ದಾಸ್ಯ ಮತ್ತು ಹೆಣ್ಣೊಬ್ಬಳ ವೇಷಭೂಷಣಕ್ಕೆ ತಳುಕು ಹಾಕಲಾಗುತ್ತದೆ. ಅವಳಿಗೆ ಮೈಮುಚ್ಚಿಕೊಳ್ಳುವುದಕ್ಕೆ ಅಥವಾ ಬಿಡುವುದಕ್ಕೆ ಆಯ್ಕೆಗಳೇ ಇಲ್ಲ. ಅಂತಹದೊಂದು ಆಯ್ಕೆಯನ್ನು ಮಹಿಳೆಯರಿಗೆ ಕೊಟ್ಟಾಗ ಅವರು ಮಿನಿ ಸ್ಕರ್ಟ್, ಪ್ಯಾಂಟು, ಶರ್ಟ್ ಮುಂತಾದ ವಸ್ತ್ರಗಳನ್ನು ಧರಿಸಬಯಸಬಹುದು. ಆದ್ದರಿಂದ ಮೆಟ್ರೋಪಾಲಿಟನ್ ನಗರಗಳಲ್ಲಿ 'ಸ್ತ್ರೀಸಶಕ್ತೀಕರಣ'ವೆಂದರೆ ಉಡುವ ಬಟ್ಟೆಗೋ ಇಲ್ಲವೇ ಮುಖದ ಮೇಕಪ್‌ಗಳಿಗೆ ಇಳಿಸಬಹುದು. ಹೆಣ್ಣಿನ ಬಾಹ್ಯ ಚಿತ್ರವೇ ವಿಮೋಚನೆಯ ಚಿಹ್ನೆಯಾಗಿ ಬಿಟ್ಟರೆ ಕಷ್ಟವಾಗಿ ಬಿಡುತ್ತದೆ.

ಹೆಣ್ಣಿನ ತೊಡುಗೆಯನ್ನು ಕುರಿತಂತೆ ಇಷ್ಟೊಂದು ಚರ್ಚೆ ಮಾಡುವ ಅಗತ್ಯವೇಕೆ ಬಂತೆಂದರೆ, ಅದು ಹೆಣ್ಣಿನ ಬಗೆಗಿರುವ ಹಲವಾರು ಐತಿಹ್ಯಗಳನ್ನು ಬಯಲು ಮಾಡುತ್ತದೆ. ಉದಾಹರಣೆಗೆ, ಇರಾನ್‌ನ ಶಾನನ್ನು ಅಯತೊಲ್ಲಾ ಖೊಮಿನಿಯು ಕೆಳಗುರುಳಿಸಿ ಅಧಿಕಾರಕ್ಕೆ ಬಂದಾಗ ಹೆಣ್ಣಿನ ಹಲವಾರು ಹಕ್ಕುಗಳನ್ನು ಮೊಟಕುಗೊಳಿಸಲಾಯಿತು. ಮಹಿಳೆಯರು ಸಾರ್ವಜನಿಕವಾಗಿ ಹೊರಗೆ ಬಂದಾಗ ಮೈಮುಚ್ಚಿಕೊಳ್ಳಬೇಕಿತ್ತು. ಅಲ್ಲಿಯೂ ಧಾರ್ಮಿಕ ಪೋಲೀಸರು ಮೈಮುಚ್ಚಿಕೊಳ್ಳದ ಮಹಿಳೆಯರನ್ನು ಆಫ್ಘಾನಿಸ್ಥಾನದ ಪೋಲಿಸರಂತೆಯೇ ಬಡಿದು ಚಚ್ಚುತ್ತಿದ್ದರು. ತಮಗೆ ಸಂಬಂಧಿಯಾಗಿರದ ಯಾವ ಪುರುಷನ ಜೊತೆಯೂ ಮಹಿಳೆಯು ಹೊರಗೆ ಹೋಗುವಂತಿರಲಿಲ್ಲ. ಆದರೂ ಅಲ್ಲಿ ಶಿಕ್ಷಣದ ಹಕ್ಕು ಮತ್ತು ಉದ್ಯೋಗ ಮಾಡುವ ಹಕ್ಕು ಮಹಿಳೆಯರಿಗಿತ್ತು. ಇಂದು ಅಲ್ಲಿ ಇನ್ನೂ ಹೆಚ್ಚಿನ ಉದಾರವಾದಿ ಸಕಾರ್ದಲ್ಲಿ ಮಹಿಳೆಯರು ಎಲ್ಲ ವೃತ್ತಿಗಳಲ್ಲೂ ಕಾಣಸಿಗುತ್ತಾರೆ. ಸರ್ಕಾರದಲ್ಲೂ ಅವರು ಕಾಣಸಿಗುತ್ತಾರೆ.

ಈ ಕೆಲವು ವಿಷಯಗಳು ಇತ್ತೀಚೆಗೆ ಇರಾನಿನ ಚಿತ್ರವೊಂದಲ್ಲಿ ಚರ್ಚಿತವಾಗಿದೆ. ಮುಂಬಯಿಯಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'The May Lady' ಎಂಬ ಇರಾನಿಯನ್ ಚಿತ್ರ ಪ್ರದರ್ಶನವಾಯಿತು. ಈ ಚಿತ್ರಕ್ಕೆ ಪ್ರಶಸ್ತಿಗಳು ಸಿಕ್ಕಿತೋ ಇಲ್ಲವೋ ಎಂಬುದು ಮುಖ್ಯವಲ್ಲ. ಆದರೆ ಇರಾನಿನ ವೃತ್ತಿ ನಿರತ ಮಹಿಳೆಯೊಬ್ಬಳ ಚಿತ್ರವನ್ನು ಇದು ನಿಮಗೆ ಪರಿಚಯಿಸುತ್ತದೆ

ಚಿತ್ರ ನಿರ್ಮಾಣ ಮಾಡುವ ಮಹಿಳೆಯೊಬ್ಬಳ ಸುತ್ತ ಈ ಚಿತ್ರದ ಕಥೆ ಸುತ್ತುತ್ತದೆ. ವಿವಾಹ ವಿಚ್ಛೇದನ ಮಾಡಿಕೊಂಡ ಈ ಮಹಿಳೆ ಅವಳ ಹದಿಹರೆಯದ ಮಗನನ್ನು ಒಬ್ಬಳೇ ಕಷ್ಟಪಟ್ಟು ಸಾಕುತ್ತಿರುತ್ತಾಳೆ. ಅವಳು ನಿರ್ಮಿಸುತ್ತಿದ್ದ, ನಿರ್ದೇಶಿಸುತ್ತಿದ್ದ ಚಿತ್ರಗಳು ತುಂಬಾ ಜನಪ್ರಿಯವಾದವು. ಅವಳು ತಾನೇ ಕಾರು ನಡೆಸುತ್ತಾಳೆ. ದೊಡ್ಡ ಮಹಡಿ ಮನೆಯಲ್ಲಿ ವಾಸಿಸುತ್ತಾಳೆ. ಟೆಹರಾನ್‌ನ ಪ್ರಮುಖವಾದ ಜಾಗದಲ್ಲಿ ವಾಸಿಸುತ್ತಿರುತ್ತಾಳೆ. ಅವಳ ಮಗ ಸಂಪೂರ್ಣ ಪಾಶ್ಚಾತ್ಯೀಕರಣಕ್ಕೊಳಗಾಗಿರುತ್ತಾನೆ. ಓದು ಬರೆಹದಲ್ಲಿ ಆಸಕ್ತಿ ತೋರಿಸದೆ, ಪಾಪ್ ಸಂಗೀತ ಕೇಳಿಕೊಂಡು ಸ್ನೇಹಿತರ ಜೊತೆ ಸೇರಿ ಮಜಾ ಮಾಡುತ್ತಿರುತ್ತಾನೆ. ಆದರೆ ಕಥಾನಾಯಕಿಯಾದರೋ ಮಗನ ಪ್ರೀತಿ ಒಂದು ಕಡೆ, ಮತ್ತೊಂದು ಕಡೆ ಪ್ರೇಮಿಯೊಬ್ಬನ ಸೆಳೆತ. ಆದರೆ ಮಗನಿಗೆ ತನ್ನ ತಂದೆಯ ಸ್ಥಾನಕ್ಕೆ ಯಾರೂ ಬರುವುದು ಬೇಕಿಲ್ಲ. ಈ ಚಿತ್ರದ ವಸ್ತುವೇನೂ ಅಪರೂಪದ್ದಲ್ಲವಾದರೂ ಚಿತ್ರ ನಿರ್ಮಾಣದ ರೀತಿ ಗಮನಾರ್ಹವಾದದ್ದು. ಗಂಡು-ಹೆಣ್ಣಿನ ಸಂಬಂಧದ ಬಗ್ಗೆ ಹೆಚ್ಚಿನ ನಿಯಂತ್ರಣವಿಲ್ಲದ ಸಮಾಜದಲ್ಲಿ ರೊಮ್ಯಾಂಟಿಕ್ ದೃಶ್ಯಗಳನ್ನು

ಚಿತ್ರಿಸುವುದೇನೂ ಕಷ್ಟವಲ್ಲ. ಇಲ್ಲಿ ಕಥಾನಾಯಕಿಗೆ ಅವಳ ಪ್ರೇಮಿ ಫೋನಿನ ಮೂಲಕ ಮಾತನಾಡುತ್ತಾನೆ, ಇಲ್ಲವೆ ಪತ್ರ ಬರೆಯುತ್ತಾನೆ. ನಿರ್ಮಾಪಕಿ ಈ ತಂತ್ರ ಬಳಸಿದ್ದಕ್ಕೆ ಮುಖ್ಯ ಕಾರಣ ಇರಾನ್‌ನಲ್ಲಿ ಸಂಬಂಧವಿರದ ಪುರುಷರ ಜೊತೆ ಹೆಂಗಸರು ಓಡಾಡುವಂತಿಲ್ಲ.

ಈ ಚಿತ್ರದ ಕಥಾನಾಯಕಿ ಯಾವಾಗಲೂ ಒಂದು ಉದ್ದದ ನಿಲುವಂಗಿಯನ್ನು ಧರಿಸುತ್ತಿದ್ದಳು. ತಲೆಗೆ ಒಂದು ಸ್ಕಾರ್ಫ್‌ನ್ನು ಇಡೀ ಚಿತ್ರದುದ್ದಕ್ಕೂ ಧರಿಸಿದ್ದಳು. ಆದರೆ ಅವಳು ಕಛೇರಿಯಲ್ಲಿ ಗಂಡಸರೊಂದಿಗೆ ಕೆಲಸ ಮಾಡುತ್ತಿರುತ್ತಾಳೆ. ಒಬ್ಬಳೇ ಕೆಫೆಗೆ ಹೋಗಿ ಕಾಫಿ ಕುಡಿಯುತ್ತಾಳೆ. ಈ ಹೆಣ್ಣಿನ ಚಿತ್ರ ನಮಗೆ ಮಾಧ್ಯಮಗಳಲ್ಲಿ ದೊರೆಯುವ ಇಸ್ಲಾಂ ರಾಷ್ಟ್ರಗಳ ಹೆಣ್ಣಿನ ಚಿತ್ರಕ್ಕಿಂತ ಭಿನ್ನವಾಗಿದೆ. ಇರಾನ್‌ನಲ್ಲಿ ವಸ್ತ್ರಸಂಹಿತೆ ಬೇರೆ ಇಸ್ಲಾಂ ರಾಷ್ಟ್ರಗಳಲ್ಲಿರುವಂತೆ ಕಂಡು ಬಂದರೂ ಉಳಿದ ವಿಷಯಗಳಲ್ಲಿ ಇರಾನ್‌ನ ಮಹಿಳೆ ಸಾಕಷ್ಟು ಮುಂದಿದ್ದಾರೆ. ಪ್ರತಿಯೊಂದು ಇಸ್ಲಾಂ ರಾಷ್ಟ್ರವೂ ಆಫ್ಘಾನಿಸ್ಥಾನದಂತಿಲ್ಲ. ಇರಾನ್‌ನಲ್ಲಿಯೂ ಕೂಡ ಕಟ್ಟುನಿಟ್ಟಿನ ನಿಯಮಗಳ ಚೌಕಟ್ಟಿನೊಳಗೇ ಮಹಿಳೆ ಬಹಳಷ್ಟು ಪ್ರಗತಿ ಸಾಧಿಸಿದ್ದಾಳೆ. ಈ ಚಿತ್ರದಲ್ಲಿ ಇರಾನಿನ ಮಹಿಳೆ ಅನುಭವಿಸಿದ ನೋವು, ತಲ್ಲಣಗಳು ಸಾರ್ವತ್ರಿಕವಾದವು. 'ಒಳ್ಳೆಯ ತಾಯಿ'ಯೆನಿಸಿಕೊಳ್ಳುವುದು ಹೇಗೆ? ಮತ್ತು ಜೊತೆಯಲ್ಲೇ ತನ್ನ ಆಸೆ, ಆಕಾಂಕ್ಷೆಗಳು ಮತ್ತು ಉದ್ಯೋಗದ ಅಗತ್ಯಗಳನ್ನು ಹೊಂದಿಸಿಕೊಳ್ಳುವುದು ಹೇಗ? ಎಂಬುದು ಈ ಚಿತ್ರಕ್ಕಷ್ಟೇ ಅಲ್ಲದೆ ಸಾರ್ವತ್ರಿಕವಾಗಿ ಎತ್ತಬಹುದಾದ ಪ್ರಶ್ನೆಗಳು.

ಮೇರಿ ಡೇಮಿಸ್ಕಿ ಲಂಡನ್ನಿನ ಪತ್ರಿಕೆ The Independentನಲ್ಲಿ ಬರೆಯುತ್ತಾ ಹೀಗೆ ಹೇಳುತ್ತಾಳೆ : ''ಬುರ್ಖಾ ಸುಟ್ಟುಹಾಕಿ ಬಿಟ್ಟಕ್ಕೆ ಮಾತ್ರ ತನಗೆ ತಾನೆ ಮಹಿಳೆಯರ ಹಕ್ಕುಗಳು ದೊರಕಿಬಿಡುವುದಿಲ್ಲ. ಇಲ್ಲದೇ ಇರುವ ಹಕ್ಕುಗಳು ಬುರ್ಖಾ ತೆಗೆದ ಮಾತ್ರಕ್ಕೆ ಸಿಗುವುದಾದರೂ ಹೇಗೆ? ಬುರ್ಖಾ ಇದ್ದಾಗ ಮಹಿಳೆಯರು ಎಷ್ಟು ಅಧಿಕಾರವಿಲ್ಲದೆ ಇರಬಹುದೋ, ಅದೇ ಸ್ಥಿತಿ ಬುರ್ಖಾ ತೆಗೆದನಂತರವೂ ಮುಂದುವರಿಯಬಹುದು. ಸಂಪೂರ್ಣ ಪುರುಷ ಪ್ರಾಧಾನ್ಯವಿರುವ ಸಮಾಜದಲ್ಲಿ ಇದು ಇನ್ನೂ ಹೆಚ್ಚು.'' ಆಫ್ಘಾನಿಸ್ಥಾನದ ಸ್ಥಿತಿಯನ್ನು ಕುರಿತಂತೆ ಹೇಳಲಾದ ಈ ಮಾತುಗಳು ಯಾವ ಸಮಾಜಕ್ಕಾದರೂ ಅನ್ವಯಿಸಬಲ್ಲುದು.

- ಕೃಪೆ ದಿ. ಹಿಂದೂ

★ ★ ★

RNI No. 45577/88

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To :
Smt/Sri

CPMG/KA/BG-8/2001
Book-Post/News Letter